# ಪಾಠ ಯೋಜನೆ : 2022–23

## 10ನೇ ತರಗತಿ

## ವಿಷಯ : ಪ್ರಥಮಭಾಷೆ – ಸಿರಿ ಕನ್ನಡ

ಬಸವರಾಜ.ಟಿ.ಎಂ
ಕನ್ನಡ ಭಾಷಾ ಶಿಕ್ಷಕರು
ಬಾಲಕಿಯರ ಸರ್ಕಾರಿ ಪ್ರೌಢಶಾಲೆ
ಹರಪನಹಳ್ಳಿ ವಿಜಯನಗರ ಜಿಲ್ಲೆ

# ಪಾಠ ಯೋಜನೆ : 2022–23

## 10ನೇ ತರಗತಿ

## ವಿಷಯ : ಪ್ರಥಮಭಾಷೆ – ಸಿರಿ ಕನ್ನಡ

| ವಿಷಯ : ಪ್ರಥಮ ಭಾಷೆ ಕನ್ನಡ | ಪಾಠ ಯೋಜನೆ | ತರಗತಿ : 10 |
|---|---|---|
| **ಪಾಠದ ಶೀರ್ಷಿಕೆ : ಗದ್ಯ–1 ಶಬರಿ (ಗೀತ ನಾಟಕ) ಪು.ತಿ.ನ** | **ದಿನಾಂಕ ರಿಂದ** | **ವರೆಗೆ** |

**ಬೋಧನೆಯ ಉದ್ದೇಶಗಳು** :1.ವಿದ್ಯಾರ್ಥಿಗಳಲ್ಲಿ ರಸಭಾವನೆಗಳ ಬೆಳವಣಿಗೆ, ಅಭಿನಯಕಲೆ, ಪಾತ್ರಗಳಿಗೆ ಜೀವಂತಿಕೆ ತುಂಬುವ ಕಲೆ ಬೆಳೆಸುವುದು.
2.ಸಾಮಾಜಿಕಪ್ರಜ್ಞೆ, ದೇಶಪ್ರೇಮ, ಸಹನಾಗುಣಗಳು, ಅತಿಥಿ ಸತ್ಕಾರ, ತಾಳ್ಮೆ,ಮಾನವೀಯ ಸದ್ಗುಣಗಳು ಮುಂತಾದ ಮೌಲ್ಯಗಳನ್ನು ಬೆಳೆಸುವುದು.

**ಕಲಿಕಾ ಸಾಮಗ್ರಿಗಳು** : ಪು.ತಿ.ನ ರವರ ಭಾವಚಿತ್ರ, ಚಂದನ ವಿಡಿಯೋ ಪಾಠ, ರಾಮಾಯಣದ ಪಾತ್ರ ಚಿತ್ರಗಳು, ಶಬರಿ ರಾಮನ ಸತ್ಕಾರದ ಕಾಲ್ಪನಿಕ ಚಿತ್ರ, ವಿ.ಸೀ.ಯವರ ಕಾದಿರುವಳು ಶಬರಿ ಹಾಡಿನ ವೀಡಿಯೋ, ಶಬರಿ ಮತ್ತು ಶ್ರೀರಾಮ ಲಕ್ಷ್ಮಣ ಮತ್ತು ಧನು ಇವರ ಬೇಟಿಯ ವೀಡಿಯೋ, ಶಬರಿ ಚಿತ್ರ ಕಥಾ ವೀಡಿಯೋ ಮುಂತಾದವು.

| ಅವಧಿ | ಉಪಘಟಕಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | |
|---|---|---|---|---|---|
| | | | ತಂತ್ರಗಳು | ಸಾಧನಗಳು | ಪ್ರಶ್ನಾಕೋಶ(ಇ–5) |
| 6 | 1.ಕವಿ ಪರಿಚಯ<br><br>2.ಶಬರಿ ಗೀತ ನಾಟಕದ ಪೂರ್ವ ಕಥೆ<br><br>3.ರಾಮನಿಗಾಗಿ ಕಾದಿರುವ ಶಬರಿ<br><br>4.ರಾಮಲಕ್ಷ್ಮಣರ ಶಬರಿಯ ಹುಡುಕಾಟ<br><br>5.ರಾಮನ ಸ್ವಾಗತಕ್ಕೆ ಶಬರಿ ಸಿದ್ದತೆಗಳು | <u>**ಪ್ರೇರಣಾ ಚಟುವಟಿಕೆ**</u><br>ಪು.ತಿ.ನ ರವರ ಡಾಕುಮೆಂಟರಿ ವೀಡಿಯೋ ತೋರಿಸುವುದು(ಇ–1) ,ಕವಿ ಪರಿಚಯ ಮಾಡಿಸುವುದು.<br>ವಿದ್ಯಾರ್ಥಿಗಳಿಂದ ಪು.ತಿ.ನ ರವರ ಸ್ಥಳ,ಕಾಲ,ಕೃತಿಗಳು,ಪ್ರಶಸ್ತಿಗಳ ಪಟ್ಟಿ ಮಾಡಿಸುವುದು ವಿದ್ಯಾರ್ಥಿಗಳಿಂದ ಓದಿಸುವುದು(ಇ–1) (ಇ–2) (ಇ–3)<br><u>**ಪಾಠ ಪ್ರಕ್ರಿಯೆಗಳು**</u><br>ರಾಮಾಯಣದಲ್ಲಿ ಬರುವ ಪಾತ್ರಗಳನ್ನು ಪಟ್ಟಿ ಮಾಡಿಸಿ, ಕಪ್ಪುಹಲಗೆ ಮೇಲೆ ಬರೆಸುವುದು. ಓದಿಸುವುದು. ರಾಮ ಲಕ್ಷ್ಮಣ, ಸೀತೆ, ಶಬರಿ ಪಾತ್ರಗಳ ಬಗ್ಗೆ ವಿದ್ಯಾರ್ಥಿಗಳಿಂದ ಹೇಳಿಸುವುದು/ಹೇಳುವುದು(ಇ–1)(ಇ–2)(ಇ–3)<br>ಶಬರಿ ಚಿತ್ರ ಕಥಾ ವೀಡಿಯೋ ತೋರಿಸುವುದು ಆ ಮೂಲಕ ಶಬರಿ ನಾಟಕದ ಕಥಾ ಹಿನ್ನಲೆಯನ್ನು ತಿಳಿಯುವುದು.<br>ಶ್ರೀರಾಮ ಲಕ್ಷ್ಮಣ ಮತ್ತು ಧನು ಇವರ ಬೇಟಿಯ ವೀಡಿಯೋ,ಅವರಿಂದ ಶಬರಿ ರಾಮನ ದರ್ಶನಕ್ಕಾಗಿ ಕಾದಿರುವ ವಿಚಾರ ತಿಳಿಯುವುದು.<br><br>ಪಾಠವನ್ನು(ಗೀತನಾಟಕವನ್ನು) ಪಾತ್ರಗಳಿಗನು ಗುಣವಾಗಿ ಗಟ್ಟಿಯಾಗಿ ಅಭಿನಯ ರೂಪದಲ್ಲಿ ಓದುವುದು. ವಿದ್ಯಾರ್ಥಿಗಳಿಗೆ ಪಾತ್ರ ಹಂಚಿ ಓದಿಸುವುದು.(ಇ–1)(ಇ–3) ಮೌನ ಓದು | ವೀಕ್ಷಣೆ<br><br>ಕವಿ ಪರಿಚಯ ಓದು<br><br>ಪಾತ್ರಗಳ ವಿವರಣೆ ಹೇಳಿಸುವುದು<br><br>ವೀಕ್ಷಣೆ<br><br>ವೀಕ್ಷಣೆ<br><br>ಪ್ರಶ್ನೋತ್ತರ | ವೀಡಿಯೋ<br><br>ಕವಿ ಪರಿಚಯದ ಪಟ್ಟಿ<br><br>ರಾಮಾಯಣ ಪಾತ್ರಗಳ ವಿವರಣಾ ಪುಸ್ತಕಗಳು<br><br>ವೀಡಿಯೋ<br><br>ವೀಡಿಯೋ<br><br>ಪ್ರಶ್ನಾಕೋಶ | 1) ಪು.ತಿ.ನ. ರವರ ಜನ್ಮಸ್ಥಳ ಯಾವುದು ?<br><br>2) ಪು.ತಿ.ನ.ರವರ ಗೀತನಾಟಕಗಳು ಯಾವಾವು ?<br><br>3)ಪು.ತಿ.ನ. ರವರ ಯಾವ ಕೃತಿಗೆ ಪಂಪ ಪ್ರಶಸ್ತಿ ದೊರೆತಿದೆ ?<br><br>4) ರಾಮ–ಲಕ್ಷ್ಮಣರ ತಂದೆ ತಾಯಿಗಳು ಯಾರು ?<br><br>5) ಭೂಮಿಜಾತೆ ಎಂದು ಯಾರನ್ನು ಕರೆಯಲಾಗಿತ್ತದೆ ?<br><br>6) ಶಬರಿಯ ಮತಂಗಾಶ್ರಮವನ್ನು ಸೇರಲು ಕಾರಣವೇನು ? |

| | | | | | |
|---|---|---|---|---|---|
| | 6.ಶಬರಿಯ ಉಪಚಾರದ ವರ್ಣನೆ<br><br>7.ಹಿಂಗಿದ ಶಬರಿಯ ಚಿಂತೆ–ಮುಕ್ತಿ<br><br>8.ಭಾಷಾ ಚಟುವಟಿಕೆ | ನೀಡುವುದು.ಚಿಕ್ಕ ಚಿಕ್ಕ ಪ್ರಶ್ನೆಗಳನ್ನು ಕೇಳುತ್ತಾ ಶಬರಿ ನಾಟಕವನ್ನು ವಿದ್ಯಾರ್ಥಿಗಳಿಗೆ ಅರ್ಥೈಸುವುದು.<br>ಶಬರಿ ರಾಮನಿಗಾಗಿ ಕಾದಿರುವ 'ಕಾದಿರುವಳು ಶಬರಿ' ವೀಡಿಯೋ ತೋರಿಸುವುದುಚಿಕ್ಕ ಚಿಕ್ಕ ಪ್ರಶ್ನೆಗಳನ್ನು ಕೇಳುತ್ತಾ ಶಬರಿ ನಾಟಕವನ್ನು ವಿದ್ಯಾರ್ಥಿಗಳಿಗೆ ಅರ್ಥೈಸುವುದು.<br>ಶಬರಿ ನಾಟಕವನ್ನು ಅಭಿನಯಿಸುವಂತೆ ವಿದ್ಯಾರ್ಥಿಗಳಿಗೆ ಪ್ರೇರೇಪಿಸುವುದು/ ಚಟುವಟಿಕೆ ಯಾಗಿ ನೀಡುವುದು(ಇ–1) (ಇ–3)<br>ಶಬರಿಯ ತಾಳ್ಮೆ,ರಾಮನ ಆದರ್ಶಗುಣಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಪ್ರೇರೇಪಿಸುವುದು. (ಇ–4)<br><br>ಅಭ್ಯಾಸ ಪ್ರಶ್ನೋತ್ತರಗಳನ್ನು ಚರ್ಚಿಸುವುದು ತರಗತಿಯಲ್ಲಿ ವಿದ್ಯಾರ್ಥಿಗಳಿಂದ ಭಾಷಾ ಚಟುವಟಿಕೆಗಳನ್ನು ಮಾಡಿಸುವುದು. | ವೀಕ್ಷಣೆ<br><br>ಪ್ರಶ್ನೋತ್ತರ<br><br>ಅಭಿನಯ<br><br>ಅವಲೋಕನ<br><br>ಅವಲೋಕನ | ವೀಡಿಯೋ<br><br>ಪ್ರಶ್ನಾಕೋಶ<br><br>ಶಬರಿ ನಾಟಕ<br><br>ತಪಶೀಲುಪಟ್ಟಿ<br><br>ಅವಲೋಕನ ಹಾಳೆ | 7. ರಾಮನ ದರ್ಶನಕ್ಕಾಗಿ ಕಾದಿರುವರು ಯಾರು ?<br><br>8. ಶಬರಿಯನ್ನು ಹುಡುಕುತ್ತ ರಾಮ–ಲಕ್ಷ್ಮಣರು ಎಲ್ಲಿಗೆ ಬಂದರು?<br><br>9. ಶಬರಿ ರಾಮನದರ್ಶನಕ್ಕಾಗಿ ಹೇಗೆ ಸಿದ್ದತೆ ಮಾಡಿಕೊಂಡಿದ್ದಳು?<br><br>5. ರಾಮನಿಗೆ ಶಬರಿ ಯಾವ ರೀತಿ ಉತ್ತರಿಸಿದಳು?<br><br>6. ಶಬರಿ ಕೊನೆಯ ಆಸೆ ಯಾವುದಾಗಿತ್ತು? |

**ವಿಷಯ ಶಿಕ್ಷಕರ ಸಹಿ** **ಮುಖ್ಯಶಿಕ್ಷಕರ ಸಹಿ**

| | | |
|---|---|---|
| **ವಿಷಯ : ಪ್ರಥಮ ಭಾಷೆ ಕನ್ನಡ** | **ಪಾಠ ಯೋಜನೆ** | **ತರಗತಿ : 10** |
| **ಪಾಠದ ಶೀರ್ಷಿಕೆ :ಪದ್ಯ– 09.ಸಂಕಲ್ಪ ಗೀತೆ (ಜಿ.ಎಸ್.ಶಿವರುದ್ರಪ್ಪ)** | **ದಿನಾಂಕ** | **ರಿಂದ ವರೆಗೆ** |

**ಬೋಧನೆಯ ಉದ್ದೇಶಗಳು :** 1.ಜೀವನದಲ್ಲಿ ಧನಾತ್ಮಕ ಭಾವನೆಯನ್ನು,ದೃಢಸಂಕಲ್ಪ ಹೊಂದಿರಬೇಕೆಂಬುದನ್ನು ತಿಳಿಸುವುದು.
2.ಸಾಧಕರಿಗೆ ಆತ್ಮವಿಶ್ವಾಸ,ಸಂಕಲ್ಪನಿಷ್ಠೆ,ಕ್ರೀಯಾಶೀಲತೆ ಎಷ್ಟು ಮುಖ್ಯವೆಂಬುದನ್ನು ಅರಿಯುವುದು.
3.ಸ್ವಾಸ್ಥನೆಲೆಯ ಸಮಾಜ ನಿರ್ಮಾಣಕ್ಕೆ ಪ್ರೀತಿಯ ಹಣತೆ ಹಚ್ಚಬೇಕೆಂಬ ಸಂಕಲ್ಪ ಮಾಡಿಸುವುದು.

**ಕಲಿಕಾ ಸಾಮಗ್ರಿಗಳು :** ರಾಷ್ಟ್ರಕವಿಗಳ ಭಾವಚಿತ್ರಗಳು ಕವಿ, ಕಾವ್ಯ ಪರಿಚಯದ ಚಾರ್ಟು, ಸಂಕಲ್ಪ ಗೀತೆ ಆಡಿಯೋ ಮತ್ತು ವೀಡಿಯೋ, ಪ್ರಶ್ನಾಕೋಶ, ಪದಗಳ ಅರ್ಥಗಳ ಚಾರ್ಟು, ಜಿ.ಎಸ್. ಶಿವರುದ್ರಪ್ಪನವರ ಕೃತಿಗಳು, ಚಂದನ ವಿಡಿಯೋ ಪಾಠ.

| ಅವಧಿ | ಉಪಘಟಕಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | |
|---|---|---|---|---|---|
| | | | ತಂತ್ರಗಳು | ಸಾಧನಗಳು | ಪ್ರಶ್ನಾಕೋಶ(ಇ–5) |
| 5 | 1.ಕವಿ ಶಿವರುದ್ರಪ್ಪನವರ ಪರಿಚಯ<br><br>2.ಪ್ರೀತಿಯ ಹಣತೆ ಹಚ್ಚಿ ಜೀವನ ಮುನ್ನಡೆಸುವುದು<br><br>3.ಮುಂಗಾರಿನ ಮಳೆ ಮತು ವಸಂತ<br><br>4.ಹೊಸಭರವಸೆಗಳ ಸೇತುವೆ | **ಪ್ರೇರಣಾ ಚಟುವಟಿಕೆ:**<br>ವಿದ್ಯಾರ್ಥಿಗಳಿಗೆ ಕನ್ನಡದ ರಾಷ್ಟ್ರ ಕವಿಗಳ ಭಾವಚಿತ್ರಗಳನ್ನು ತೋರಿಸುವುದು. ಆ ಮೂಲಕ ಜಿ.ಎಸ್.ಶಿವರುದ್ರಪ್ಪನವರನ್ನು ಪರಿಚಯಿಸುವುದು, ಅವರ ಕೆಲವು ಕೃತಿಗಳಗನ್ನು ತೋರಿಸುತ್ತಾ ಎದೆತುಂಬಿ ಹಾಡಿದನು ಕವನ ಸಂಕಲನದಲ್ಲಿನ ಭಾವಗೀತೆಗಳ ಶೀರ್ಷಿಕೆಗಳನ್ನು ಬರೆಸುವುದು ಅದರಲ್ಲಿನ ಸಂಕಲ್ಪಗೀತೆ ಪದ್ಯವನ್ನು ಗುರುತಿಸುವುದು(ಇ–1)<br><br>**ಪಾಠ ಪ್ರಕ್ರಿಯೆಗಳು**<br>ಸಂಕಲ್ಪಗೀತೆ ಪದ್ಯವನ್ನು ಆಡಿಯೋ ಮೂಲಕ ಕೇಳಿಸುವುದು.ವಿದ್ಯಾರ್ಥಿಗಳಿಂದ ಸಾಮೂಹಿಕವಾಗಿ ಹಾಡಿಸುವುದು<br>ಸಂಕಲ್ಪ ಗೀತೆಯ ವೀಡಿಯೋವನ್ನು ತೋರಿಸುವುದು ಆ ಮೂಲಕ ಭಾವವನ್ನು ಅರ್ಥೈಸುವುದು.<br><br>ಶಿಕ್ಷಕರ ಪದ್ಯ ವಾಚನ ಪದ್ಯಗಳನ್ನು ಕಪ್ಪುಹಲಗೆ ಮೇಲೆ ಬರೆಸುವುದು ನಂತರ ಹೊಸಪದಗಳ ಅರ್ಥಗಳನ್ನು ಬಳಸಿ ಪದ್ಯಗಳ ಸಾರಂಶವನ್ನು ವಿದ್ಯಾರ್ಥಿಗಳಿಂದ ಬರೆಸಲು ಪ್ರಯತ್ನಿ ಸುವುದು ಮತ್ತು ತರಗತಿಯಲ್ಲಿ ಸಾರಾಂಶವನ್ನು ವಾಚಿಸುವ ಚಟುವಟಿಕೆಯನ್ನು ಮಾಡಿಸುವುದು. (ಇ–1)(ಇ–2)(ಇ–3) ಪದ್ಯದ ಭಾವಾರ್ಥ ವನ್ನು ಪ್ರಶ್ನೋತ್ತರ ವಿಧಾನದ ಮೂಲಕ ಅರ್ಥೈಸುವುದು | ಕವಿ ಚಿತ್ರಗುರುತಿಸುವುದು<br><br>ಕವಿಪರಿಚಯ<br><br>ಆಕಾರ ಗ್ರಂಥ ಗುರುತಿಸಿವುದು<br><br>ಗೀತೆ ಕೇಳಿಸುವುದು<br><br>ವೀಕ್ಷಣೆ | ಕವಿಗಳ ಚಿತ್ರಗಳು<br><br>ಕವಿಕಾವ್ಯ ಪರಿಚಯ ಚಾರ್ಟು<br><br>ಆಕಾರ ಗ್ರಂಥ<br><br>ಆಡಿಯೋ<br><br>ವೀಡಿಯೋ | 1.ಕನ್ನಡದ ರಾಷ್ಟ್ರಕವಿಗಳನ್ನು ಹೆಸರಿಸಿ<br><br>2.ಜಿ.ಎಸ್.ಶಿವರುದ್ರಪ್ಪನವರ ಯಾವ ಕೃತಿಗೆ ಕೇಂದ್ರಸಾಹಿತ್ಯ ಆಕಾಡೆಮಿ ಪ್ರಶಸ್ತಿ ದೊರೆತಿದೆ<br><br>3.ಸಂಕಲ್ಪಗೀತೆ ಪದ್ಯವನ್ನು ಜಿ.ಎಸ್. ಶಿವರುದ್ರಪ್ಪನವರ ಯಾವ ಕೃತಿಯಿಂದ ಆರಿಸಿಕೊಳ್ಳಲಾಗಿದೆ.?<br><br>4.ಎಂತಹ ಹಣತೆ ಹಚ್ಚಬೇಕೆಂದು ಕವಿಹೇಳುತ್ತಾರೆ ?<br><br>5.ಯಾವುಗಳಿಗೆ ಮುಂಗಾರಿನ ಮಳೆಯಾಗಬೇಕು ?<br><br>6.ಏನನ್ನು ಕೆಡವಿ ಸೇತುವೆಯನ್ನು ಕಟ್ಟಬೇಕು |

| | | | | | |
|---|---|---|---|---|---|
| | 5.ಹೊಸ ಬಾಳಿನ ಹೊಸ ಕನಸನು ಬಿತ್ತೋಣ<br><br><br><br><br>6. ಭಾಷಾ ಚಟುವಟಿಕೆ | ಜೀವನದಲ್ಲಿ ದೃಢಸಂಕಲ್ಪ ಕೈಗೊಳ್ಳ ಬೇಕೆಂಬ ಆಶಯವನ್ನು ಹೊಂದುವಂತೆ ಪ್ರೇರೇಪಿಸುವುದು. (ಇ–4)<br>ತರಗತಿಯಲ್ಲಿ ವಿದ್ಯಾರ್ಥಿಗಳಿಂದ ಭಾಷಾ ಚಟುವಟಿಕೆಗಳನ್ನು ಮಾಡಿಸುವುದು. (ಇ–1)<br><br>ನಿಗದಿತ ಪದ್ಯಭಾಗ ಕಂಠಪಾಠ ಮಾಡಿಸುವುದು<br>ತರಗತಿಯಲ್ಲಿ ವಿದ್ಯಾರ್ಥಿಗಳಿಂದ ರಾಗಬದ್ಧವಾಗಿ ಹಾಡುವ ಚಟುವಟಿಕೆ ನೀಡುವುದು. (ಇ–1) (ಇ–3) | ಪದ್ಯಬರವಣಿಗೆ<br><br>ವಾಚನ<br><br><br>ಪ್ರಶ್ನೋತ್ತರ | ಕಪ್ಪುಹಲಗೆ<br><br>ಪದ್ಯದ ಸಾರಾಂಶ<br><br><br>ಪ್ರಶ್ನಾಕೋಶ | 7.ಯಾವ ಎಚ್ಚರದಲ್ಲಿ ಬದುಕಬೇಕು ?<br><br>8.ನಾಳಿನ ಕನಸನ್ನು ಎಲ್ಲಿ ಬಿತ್ತಬೇಕು ? |

**ವಿಷಯ ಶಿಕ್ಷಕರ ಸಹಿ** **ಮುಖ್ಯಶಿಕ್ಷಕರ ಸಹಿ**

| ವಿಷಯ : ಪ್ರಥಮ ಭಾಷೆ ಕನ್ನಡ | ಪಾಠ ಯೋಜನೆ | | ತರಗತಿ : 10 |
|---|---|---|---|
| ಪಾಠದ ಶೀರ್ಷಿಕೆ : ಗದ್ಯ–02. ಲಂಡನ್ ನಗರ (ವಿ.ಕೃ.ಗೋಕಾಕ್ ) | ದಿನಾಂಕ | ರಿಂದ | ವರೆಗೆ |

**ಬೋಧನೆಯ ಉದ್ದೇಶಗಳು:** 1.ದೇಶೀಯ ಮತ್ತು ಅಂತರಾಷ್ಟ್ರೀಯ ಪ್ರವಾಸ ಸಾಹಿತ್ಯ ಓದುವ, ರಚಿಸುವ, ಹವ್ಯಾಸ ಬೆಳೆಸುವುದು.
2.ಲಂಡನ್ ನಗರದ ಸ್ವಚ್ಚತೆ,ಸೌಂದರ್ಯ ಮತ್ತು ಅಲ್ಲಿಯ ಜೀವನದ ರೀತಿ ನೀತಿಗಳನ್ನು ಅರಿಯುವುದು.
3.ಲಂಡನ್ ನಗರದ ಸ್ಥಿತಿಗತಿಗಳನ್ನು ನಮ್ಮ ದೇಶದ ನಗರಗಳೊಂದಿಗೆ ಹೋಲಿಸಿ ನೋಡುವುದು.

**ಕಲಿಕಾ ಸಾಮಗ್ರಿಗಳು :** ವಿ.ಕೃ.ಗೋಕಾಕ್ ರ ಭಾವಚಿತ್ರ ,ಜ್ಞಾನಪೀಠ ಪ್ರಶಸ್ತಿ ವಿಜೇತರ ಭಾವಚಿತ್ರಗಳು, ಪ್ರವಾಸಕಥನಕಗಳ ಪುಸ್ತಕಗಳು, ಪ್ರೇಕ್ಷಣೀಯ ಸ್ಥಳಗಳ ಚಿತ್ರಪಟಗಳು, ಕವಿಕಾವ್ಯಪರಿಚಯದ ಚಾರ್ಟು,ಲಂಡನ್ ನಗರದ ವೀಡಿಯೋಗಳು, ಪಠ್ಯದಲ್ಲಿ ಹೆಸರಿಸಿರುವ ಇಂಗ್ಲೆಂಡಿನ ಪ್ರಸಿದ್ಧ ವ್ಯಕ್ತಿಗಳ ಭಾವಚಿತ್ರಗಳು, ಚಂದನ ವಿಡಿಯೋ ಪಾಠ.

| ಅವಧಿ | ಉಪಘಟಕಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | |
|---|---|---|---|---|---|
| | | | ತಂತ್ರಗಳು | ಸಾಧನಗಳು | ಪ್ರಶ್ನಾಕೋಶ (ಇ–5) |
| 7 | 1.ಕವಿ– ಕಾವ್ಯ ಪರಿಚಯ | **ಪ್ರೇರಣಾ ಚಟುವಟಿಕೆ**<br>ಜ್ಞಾನಪೀಠ ಪ್ರಶಸ್ತಿ ವಿಜೇತರ ಭಾವಚಿತ್ರಗಳನ್ನು ತೋರಿಸುತ್ತ ವಿ.ಕೃ.ಗೋಕಾಕ್ ರವರನ್ನು ಗುರುತಿ ಸುವುದು. (ಇ–2) (ಇ–1)<br>ಸಂದರ್ಶನ ವಿಧಾನದ ಮೂಲಕ ವಿದ್ಯಾರ್ಥಿ ಕವಿ ಪರಿಚಯ ಮಾಡಿಕೊಡುವುದು. (ಇ–1) ಮತ್ತೊಬ್ಬ ವಿದ್ಯಾರ್ಥಿ ಅವರ ಸ್ಥಳ,ಕಾಲ,ಕೃತಿಗಳು,ಪ್ರಶಸ್ತಿಗಳನ್ನು ಕಪ್ಪು ಹಲಗೆ ಮೇಲೆ ಬರೆದು ಓದುವುದು. (ಇ–1) (ಇ–3) | ಕವಿಯ ಚಿತ್ರ ಗುರುತಿಸುವುದು<br>ಸಂದರ್ಶನ<br>ಬರವಣಿಗೆ | ಜ್ಞಾನ ಪೀಠ ಪ್ರಶಸ್ತಿ ವಿಜೇತ ಕನ್ನಡಿಗರ ಭಾವ ಚಿತ್ರಗಳು<br>ವಿದ್ಯಾರ್ಥಿ ಕವಿ<br>ಕಪ್ಪುಹಲಗೆ | 1) ಜ್ಞಾನಪೀಠ ಪ್ರಶಸ್ತಿ ವಿಜೇತ ಕನ್ನಡಿಗರನ್ನು ಹೆಸರಿಸಿ.<br>2) ವಿ.ಕೃ.ಗೋಕಾಕ್ ಎಲ್ಲಿ,ಯಾವಾಗ ಜನಿಸಿದರು ?<br>3) ಗೋಕಾಕರಿಗೆ ದೊರೆತ ಪ್ರಶಸ್ತಿಗಳ ಪಟ್ಟಿ ಮಾಡಿರಿ. |
| | 2.ಲಂಡನ್ ಪಟ್ಟಣ<br>3.ವೂಲವರ್ಥ್, ಸಿಂಪಿಗಳು ಮತ್ತು ಅಮ್ಮಣ್ಣಿಗಳು | ದೇಶಿಯ ಹಾಗೂ ವಿದೇಶಿಯ ಪ್ರೇಕ್ಷಣೀಯ ಸ್ಥಳಗಳ ಚಿತ್ರಪಟ ತೋರಿಸಿ ಅವುಗಳು ಇರುವ ಸ್ಥಳಗಳನ್ನು ಹೇಳಿಸುವುದು. ಕಪ್ಪುಹಲಗೆ ಮೇಲೆ ಬರೆಸುವುದು, ಓದಿಸುವುದು. (ಇ–1) (ಇ–2)<br>ತಾವು ಕೈಗೊಂಡಿದ್ದ ಶೈಕ್ಷಣಿಕ ಪ್ರವಾಸದ ಅನುಭವಗಳನ್ನು ವಾಕ್ಯಗಳನ್ನು ಬರೆದು ಓದುವಂತೆ ಪ್ರೇರೇಪಿಸುವುದು.(ಚಟುವಟಿಕೆ) (ಇ–4) | ವೀಕ್ಷಣೆ<br>ಬರವಣಿಗೆ | ಪ್ರೇಕ್ಷಣೀಯ ಸ್ಥಳಗಳ ಚಿತ್ರಪಟಗಳು<br>ವಿದ್ಯಾರ್ಥಿ ಅನುಭವಗಳು | 4) ತಲಕಾಡು ಯಾವ ಜಿಲ್ಲೆಯಲ್ಲಿದೆ ?<br>5) ಜಯಪುರ ಯಾವ ರಾಜ್ಯದಲ್ಲಿದೆ ?<br>6) ತಾಜ್ ಮಹಲ್ ಎಲ್ಲಿದೆ ?<br>7) ಬೆಂಗಳೂರು ನಗರ ಯಾವ ದೇಶದಲ್ಲಿದೆ<br>8) ಲಂಡನ್ ನಗರ ಯಾವ ದೇಶದಲ್ಲಿದೆ ? |
| | 4.ಇಂಡಿಯಾ ಆಫೀಸ್‌ನ ವಾಚನಾಲಯ | **ಪಾಠ ಪ್ರಕ್ರಿಯೆಗಳು**<br>ಲಂಡನ್ ನಗರದ ವೀಡಿಯೋವನ್ನು ತೋರಿಸುವುದರೊಂದಿಗೆ ಅಲ್ಲಿಯ ಸೌಂದರ್ಯವನ್ನು ತಿಳಿಯುವುದು.<br>ಕವಿ ಪರಿಚಯದೊಂದಿಗೆ ಪಾಠವನ್ನು ಗಟ್ಟಿಯಾಗಿ ವಾಚಿಸುವುದು. ವಿದ್ಯಾರ್ಥಿಗಳಿಂದ ಗಟ್ಟಿಓದು, ಮೌನ ಓದು ಮಾಡಿಸುವುದು. ಪ್ರಶ್ನೋತ್ತರ ವಿಧಾನದ ಮೂಲಕ ಚರ್ಚಿಸುತ್ತಾ ಸಂವಹನ ನಡೆಸುವುದು. | ಪ್ರಶ್ನೋತ್ತರ | ಪ್ರಶ್ನಾಕೋಶ | 9)ಲಂಡನ್ನಿನ ರಸ್ತೆಗಳಲ್ಲಿ ಬಸ್ಸುಗಳು ನಿಲ್ಲುವುದನ್ನು ತಪ್ಪಿಸಲು ಮಾಡಿರುವ ವ್ಯವಸ್ಥೆಯೇನು ?<br>10) ಲೇಖಕರು ನೋಡಿದ ಸ್ಟೇಷನರಿ ಅಂಗಡಿಯ ಹೆಸರೇನು ?<br>11)ಸಿಂಪಿಗಳು ಸಾದಾ ಸೂಟ್ ಹೊಲಿಯಲು ಎಷ್ಟು ಹಣ ತೆಗೆದುಕೊಳ್ಳುತ್ತಾರೆ ? |

| | | | | | |
|---|---|---|---|---|---|
| | 5.ಟ್ರಾಫಲ್ಗಾರ್ ಸ್ಕ್ವೇರ್ | ವಾಚನಾಲಯಕ್ಕೆ ಸಂಬಂಧಿಸಿದಂತೆ ಕೆಲವು ಪತ್ರಿಕೆಗಳನ್ನು ತೋರಿಸುವುದು, ನಮ್ಮ ದೇಶದಲ್ಲಿ ಪ್ರಕಟವಾಗುವ ಪತ್ರಿಕೆಗಳ ಪಟ್ಟಿ ಮಾಡಿಸುವುದು. ಪತ್ರಿಕೆಗಳ ಮಹತ್ವವನ್ನು ಕುರಿತು ಭಾಷಣ ಮಾಡಿಸುವುದು. (ಇ–1) (ಇ–2) (ಇ–3) | ಭಾಷಣ | ಪ್ರಬಂಧ ಪುಸ್ತಕ | 12) ಆಂಗ್ಲರ ಸಾಮ್ರಾಜ್ಯ ವೈಭವವು ಯಾವ ಓಣಿಯಲ್ಲಿ ಕಂಡುಬರುವುದು ? |
| | 6.ವೆಸ್ಟ್‌ಮಿನಿಸ್ಟರ್ ಅಬೆ | ನಮ್ಮ ಕರ್ನಾಟಕದಲ್ಲಿನ ವಸ್ತು ಸಂಗ್ರಹಾಲಯಗಳ ವೀಡಿಯೋವನ್ನು ತೋರಿಸಿ ಮಾಹಿತಿ ಸಂಗ್ರಹಿಸುವ ಚಟುವಟಿಕೆ ಮಾಡಿಸುವುದು. (ಇ–2) | ವೀಕ್ಷಣೆ | ವೀಡಿಯೋ | 13) ನೆಲ್ಸನ್ನನ ಮೂರ್ತಿ ಎಲ್ಲಿದೆ ? |
| | | ಟ್ರಾಫಲ್ಗಾರ್ ಸ್ಕ್ವೇರ್‌ದ ವೀಡಿಯೋವನ್ನು ತೋರಿಸುತ್ತ ಅಲ್ಲಿಯ ಮಾಹಿತಿಯ ವಿಷಯಗಳನ್ನು ಬರೆಸುವುದು,ಓದಿಸುವುದು. (ಇ–2) | ವೀಕ್ಷಣೆ | ವೀಡಿಯೋ | 14)ಲೇಖಕರು ನೋಡಿದ ಪ್ರಾರ್ಥನಾ ಮಂದಿರದ ಹೆಸರೇನು ?<br>15) ವೆಬ್ ಮಿನಿಸ್ಟರ್ ಅಬೆ ಯಾರ ಸ್ಮಾರಕವಾಗಿದೆ ? |
| | 7.ಅರಸರ ಅರಮನೆ | ಪಠ್ಯದಲ್ಲಿ ಹೆಸರಿಸಿರುವ ಇಂಗ್ಲೆಂಡಿನ ಪ್ರಸಿದ್ಧ ವ್ಯಕ್ತಿಗಳ ಭಾವಚಿತ್ರಗಳನ್ನು ತೋರಿಸುತ್ತ ಅವರ ಸಂಕ್ಷಿಪ್ತ ಮಾಹಿತಿಯನ್ನು ಸಂಗ್ರಹಿಸಲು ವಿಶ್ವಕೋಶದಲ್ಲಿ ಹುಡುಕುವಂತೆ ಚಟುವಟಿಕೆ ನೀಡುವುದು. (ಇ–2) | ಚಿತ್ರಗಳನ್ನು ಗುರುತಿಸುವುದು<br>ಮಾಹಿತಿ ಸಂಗ್ರಹ | ಚಿತ್ರಗಳು<br>ವಿಶ್ವಕೋಶಗಳು | 16) ಪೊಯೆಟ್ಸ್ ಕಾರ್ನರ್ ನಲ್ಲಿ ತಪಸ್ಸಿಗೆ ಕುಳಿತಿದ್ದವರು ಯಾರು ?<br>17) ಅರಮನೆಯಲ್ಲಿ ಯಾರ್‍ಯಾರ ಮೂರ್ತಿಗಳಿವೆ ? |
| | 8.ಭಾಷಾ ಚಟುವಟಿಕೆಗಳು | ಇಂಗ್ಲೆಂಡ್‌ನ ಅರಮನೆಯ ವೀಡಿಯೋವನ್ನು ತೋರಿಸುತ್ತ ಮಾಹಿತಿ ಸಂಗ್ರಹಿಸುವುದು.ನಮ್ಮ ದೇಶದ ಅರಮನೆಗಳ ಮಾಹಿತಿಯನ್ನು ಸಂಗ್ರಹಿಸುವುದು. (ಇ–2)<br>ಪ್ರಶ್ನೋತ್ತರಗಳ ಚರ್ಚೆ | ವೀಕ್ಷಣೆ<br>ಅರಮನೆಗಳ ಚಿತ್ರ ಗುರುತಿಸುವುದು | ವೀಡಿಯೋ<br>ಅರಮನೆಗಳ ಚಿತ್ರಗಳು | 18) ಸ್ಟೋನ್ ಆಫ್ ಸ್ಟೋನ್ ಎಲ್ಲಿದೆ ? |

**ವಿಷಯ ಶಿಕ್ಷಕರ ಸಹಿ** **ಮುಖ್ಯಶಿಕ್ಷಕರ ಸಹಿ**

| ವಿಷಯ : ಪ್ರಥಮ ಭಾಷೆ ಕನ್ನಡ | ಪಾಠ ಯೋಜನೆ | | ತರಗತಿ : 10 |
|---|---|---|---|
| ಪಾಠದ ಶೀರ್ಷಿಕೆ : ಪದ್ಯ-02. ಹಕ್ಕಿ ಹಾರುತಿದೆ ನೋಡಿದಿರಾ ? | ದಿನಾಂಕ | ರಿಂದ | ವರೆಗೆ |

**ಬೋಧನೆಯ ಉದ್ದೇಶಗಳು :** 1.ತಾರ್ಕಿಕ ಪ್ರಜ್ಞೆ ಮತ್ತು ವಿಮರ್ಶಾತ್ಮಕ ಗುಣಗಳನ್ನು ಬೆಳೆಸುವುದು.
2.ಕಾಲದಗತಿಯನ್ನು ಹಕ್ಕಿಹಾರುವಿಕೆಗೆ ಹೇಗೆ ಸಮೀಕರಿಸಿದ್ದಾರೆಂಬುದನ್ನು ಅರ್ಥೈಸಿಕೊಳ್ಳುವುದು.
3.ಕಾಲದ ಮಹತ್ವವನ್ನು ಅರಿಯುವುದು.

**ಕಲಿಕಾ ಸಾಮಗ್ರಿಗಳು :** ದ.ರಾ ಬೇಂದ್ರಯವರ ಭಾವಚಿತ್ರ, ಕವಿ ಪರಿಚಯದ ವೀಡಿಯೋ , ಕವಿಕಾವ್ಯಪರಿಚಯದ ಚಾರ್ಟ್, ಭಾವಗೀತೆಯ ಧ್ವನಿಸುರುಳಿ, 'ಗರಿ' ಕವನ ಸಂಕಲನ ಹಕ್ಕಿ ಹಾರುತಿದೆ ವೀಡಿಯೋ, ಜ್ಞಾನಪೀಠ ಪ್ರಶಸ್ತಿ ವಿಜೇತ ಕನ್ನಡಿಗರ ಚಿತ್ರಗಳು, ಚಂದನ ವಿಡಿಯೋ ಪಾಠ.

| ಅವಧಿ | ಉಪಘಟಕಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | |
|---|---|---|---|---|---|
| | | | ತಂತ್ರಗಳು | ಸಾಧನಗಳು | ಪ್ರಶ್ನಾಕೋಶ (ಇ-5) |
| 7 | 1.ಕವಿ-ಕಾವ್ಯ ಪರಿಚಯ<br><br>2.ಕಾಲದ ವಿಸ್ತಾರ<br><br>3.ಕಾಲದ ಗುರುತುಗಳು<br><br>4.ಕಾಲದ ವಿಶಾಲತೆ, ವ್ಯಾಪ್ತಿ<br><br>5.ಕಾಲದ ಸಾರ್ವಭೌಮತ್ವ | **<u>ಪ್ರೇರಣಾ ಚಟುವಟಿಕೆ</u>**<br>ಜಿ.ಎಸ್.ಶಿವರುದ್ರಪ್ಪ ನವರ 'ಎಲ್ಲೋ ಹುಡುಕಿದೆ ಇಲ್ಲದ ದೇವರ'ಭಾವ ಗೀತೆಯನ್ನು ಕೇಳಿಸುವುದು. ವಿದ್ಯಾರ್ಥಿಗಳಿಂದ ಭಾವಗೀತೆಯನ್ನು ಹಾಡಿಸಲು ಪ್ರೇರೇಪಿಸುವುದು. ಜ್ಞಾನಪೀಠ ಪ್ರಶಸ್ತಿ ವಿಜೇತರ ಭಾವಚಿತ್ರಗಳನ್ನು ತೋರಿಸುತ್ತ ಬೇಂದ್ರೆಯವರನ್ನು ಗುರುತಿಸುವುದು. (ಇ-1) (ಇ-2) (ಇ-3)<br><br>ಬೇಂದ್ರೆಯವರ ಪರಿಚಯದ ವೀಡಿಯೋ ತೋರಿಸುವುದು ಆ ಮೂಲಕ ಅವರ ಸ್ಥಳ,ಕಾಲ,ಕೃತಿ,ಪ್ರಶಸ್ತಿಗಳ ವಿವರಗಳನ್ನು ಕಪ್ಪು ಹಲಗೆ ಮೇಲೆ ಬರೆಸುವುದು ,ವಿದ್ಯಾರ್ಥಿಗಳಿಂದ ಓದಿಸುವುದು ವಿದ್ಯಾರ್ಥಿಯೇ ಬೇಂದ್ರೆಯಾಗಿ ತನ್ನ ಪರಿಚಯ ಮಾಡಿಕೊಳ್ಳುವುದು. (ಇ-1,ಇ-2, ಇ-3)<br><br>**<u>ಪಾಠ ಪ್ರಕ್ರಿಯಗಳು</u>**<br>ಭಾವಗೀತೆಯನ್ನು ರಾಗವಾಗಿ ಹಾಡುವುದು, ಧ್ವನಿಸುರುಳಿ ಮೂಲಕ ಕೇಳಿಸುವುದು. ವಿದ್ಯಾರ್ಥಿ ಗಳಿಂದ ಸಾಮೂಹಿಕವಾಗಿ ಹಾಡಿಸುವುದು. (ಇ-1)<br><br>ಹಕ್ಕಿ ಹಾರುತಿದೆ ವೀಡಿಯೋ ತೋರಿಸುವುದು, | ಹಾಡಿಸುವುದು<br><br>ಚಿತ್ರ ಗುರುತಿಸುವುದು<br><br>ವೀಕ್ಷಣೆ<br><br>ಕೇಳಿಸುವುದು<br><br>ವೀಕ್ಷಣೆ | ಭಾವಗೀತಾ ಸಾಹಿತ್ಯ<br><br>ಜ್ಞಾನ ಪೀಠ ಪ್ರಶಸ್ತಿ ವಿಜೇತ ಕನ್ನಡಿಗರ ಚಿತ್ರಗಳು<br><br>ವೀಡಿಯೋ<br><br>ಧ್ವನಿಸುರುಳಿ<br><br>ವೀಡಿಯೋ | 1. ಬೇಂದ್ರೆಯವರ ಯಾವ ಕೃತಿಗೆ ಜ್ಞಾನಪೀಠ ಪ್ರಶಸ್ತಿ ದೊರೆತ್ತಿದೆ.?<br><br>2.ಜ್ಞಾನಪೀಠ ಪ್ರಶಸ್ತಿ ವಿಜೇತ ಕನ್ನಡಿಗರನ್ನು ಹೆಸರಿಸಿ.<br><br>3.ಬೇಂದ್ರೆಯವರ ಯಾವ ಕೃತಿಯಿಂದ ಹಕ್ಕಿ ಹಾರುತಿದೆ ನೋಡಿದಿರಾ ಪದ್ಯವನ್ನು ಆರಿಸಲಾಗಿದೆ ?<br><br>4. ಹಕ್ಕಿ ಯಾವ ವೇಗದಲ್ಲಿ ಹಾರುತ್ತದೆ.?<br><br>5. ಹಕ್ಕಿಯ ಗರಿಯಲ್ಲಿ ಯಾವ ಬಣ್ಣಗಳಿವೆ.?<br><br>6<br>. ಹಕ್ಕಿಯ ಕಣ್ಣುಗಳು ಯಾವುವು?<br><br>7. ಹಕ್ಕಿಯ ಯಾರ ನೆತ್ತಿಯನ್ನು ಕುಕ್ಕಿದೆ?<br><br>6. ಹಕ್ಕಿ ಯಾರನ್ನು ಹರಸಿದೆ? |

| | | | | | |
|---|---|---|---|---|---|
| | 6.ಕಾಲದ ಹಾರೈಕೆ<br><br>7.ಹಕ್ಕಿಯ ಕಬಂಧ ಬಾಹುಗಳ ಚಾಚುವಿಕೆ<br>8.ಹಕ್ಕಿ ಹಾಕಿದ ಹೊಂಚು<br><br>9.ಭಾಷಾ ಚಟುವಟಿಕೆಗಳು | ಮೌನವಾಚನ ಮಾಡುವುದು<br>ಪ್ರಶ್ನೋತ್ತರ ವಿಧಾನದ ಮೂಲಕ ಆರ್ಥೈಸುವುದು.<br><br>ಪದ್ಯದ ಸಾರಾಂಶವನ್ನು ಬರೆಯಲು ಪ್ರೇರೇಪಿಸುವುದು(ಇ–2)<br>ಮತ್ತು ಚಟುವಟಿಕೆಯಾಗಿ ನೀಡಿ ತರಗತಿಯಲ್ಲಿ ವಾಚಿಸುವಂತೆ ಮಾಡುವುದು. (ಇ–3)<br><br>ಅಭ್ಯಾಸ ಪ್ರಶ್ನೋತ್ತರಗಳ ಚರ್ಚೆ<br><br>ತರಗತಿಯಲ್ಲಿ ವಿದ್ಯಾರ್ಥಿಗಳಿಂದ ಭಾಷಾ ಚಟುವಟಿಕೆಗಳನ್ನು ಮಾಡಿಸುವುದು. (ಇ–4)<br><br>ಪದ್ಯಭಾಗವನ್ನು ಕಂಠಪಾಠ ಮಾಡಿಸಿ ತರಗತಿಯಲ್ಲಿ ಹಾಡಿಸುವುದು (ಚಟುವಟಿಕೆಯಾಗಿ ನೀಡುವುದು) (ಇ–3) | ಪ್ರಶ್ನೋತ್ತರ<br><br>ಚಟುವಟಿಕೆ<br><br>ಚರ್ಚೆ<br><br>ವಿದ್ಯಾರ್ಥಿಗಳಿಂದ ಚಟುವಟಿಕೆ<br><br>ಬರವಣಿಗೆ<br><br>ಹಾಡಿಸುವುದು | ಪ್ರಶ್ನಾಕೋಶ<br><br>ಸಾರಂಶ ಭಾಗ<br><br>ಪ್ರಶ್ನಾಕೋಶ<br><br>ವ್ಯಾಕರಣ ಪುಸ್ತಕ<br><br>ಪುಸ್ತಕಗಳು<br><br>ಹ,ಹಾ,ನೋ–ಪದ್ಯ | 7.ಹಕ್ಕಿಯು ಯಾವುದರ ಸಂಕೇತವಾಗಿದೆ.?<br><br>8.ಹಕ್ಕಿಯ ಚುಂಚಗಳು ಎಲ್ಲಿಯವರೆಗೆ ಚಾಚಿವೆ ? |

**ವಿಷಯ ಶಿಕ್ಷಕರ ಸಹಿ** **ಮುಖ್ಯಶಿಕ್ಷಕರ ಸಹಿ**

| ವಿಷಯ : ಪ್ರಥಮ ಭಾಷೆ ಕನ್ನಡ | ಪಾಠ ಯೋಜನೆ | ತರಗತಿ : 10 |
|---|---|---|
| ಪಾಠದ ಶೀರ್ಷಿಕೆ : ಗದ್ಯ–03.ಶುಕನಾಸನ ಉಪದೇಶ (ಬನ್ನಂಜೆ ಗೋವಿಂದಾಚಾರ್ಯ) ದಿನಾಂಕ | ರಿಂದ | ವರೆಗೆ |

**ಬೋಧನೆಯ ಉದ್ದೇಶಗಳು**:1) ಗುರುವಿನ ಉಪದೇಶದ ಮಹತ್ತ್ವವನ್ನು ತಿಳಿಸುವುದು.
2) ದುಡ್ಡಿ ಇದ್ದಾಗ ಹೇಗಿರಬೇಕು ಎಂಬುದನ್ನು ಅರ್ಥೈಸುವುದು.
3) ದುಡ್ಡಿನ ಅನರ್ಥಗಳನ್ನು ವಿವರಿಸುವುದು.

**ಕಲಿಕಾ ಸಾಮಗ್ರಿಗಳು** ಕವಿ ಪರಿಚಯದ ವೀಡಿಯೋ, ಕಥೆ ಪುಸ್ತಕಗಳು, ಸಮುದ್ರ ಮಥನದ ವಿಡಿಯೋ, ಚಿತ್ರಗಳು.

| ಅವಧಿ | ಉಪಘಟಕಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | |
|---|---|---|---|---|---|
| | | | ತಂತ್ರಗಳು | ಸಾಧನಗಳು | ಪ್ರಶ್ನಾಕೋಶ (ಇ–5) |
| 6 | 1.ಕವಿ–ಕಾವ್ಯ ಪರಿಚಯ<br><br>2.ಗುರೂಪದೇಶ | **ಪ್ರೇರಣಾ ಚಟುವಟಿಕೆ**<br>ದುಡ್ಡಿನ ಕಥೆ ಇರುವ ಚಿಕ್ಕ ಚಿಕ್ಕ ಕಥೆಗಳನ್ನು ಹೇಳುವುದರ ಮೂಲಕ ಪೀಠಿಕೆ ಹಾಕುವುದು.(ಇ–1)<br>ಚಿಕ್ಕ ಚಿಕ್ಕ ಪ್ರಶ್ನೆಗಳನ್ನು ಕೇಳುತ್ತ ದುಡ್ಡಿನ ಆಸೆ ಅದರಿಂದ ಆಗುವ ಅನಾವುತಗಳ ಬಗ್ಗೆ ಚರ್ಚಿಸುವುದು.(ಇ–1, ಇ–2,ಇ–5)<br><br>ದುಡ್ಡೆ ದೊಡ್ಡಪ್ಪ ವಿದ್ಯೆ ಅದರಪ್ಪ ಎಂಬ ಗಾದೆ ಮಾತನ್ನು ವಿಸ್ತರಿಸಿ ಹೇಳಲು ಚಟುವಟಿಕೆ ನೀಡುವುದು.(ಇ–4)<br>ಕಥೆಯ ಹಿನ್ನೆಲೆಯನ್ನು ಪರಿಚಯಿಸುವುದು.<br><br>**ಪಾಠ ಪ್ರಕ್ರಿಯೆಗಳು**<br>ವಿದ್ಯಾವಾಚಸ್ಪತಿ ಡಾ. ಬನ್ನಂಜೆ ಗೋವಿಂದಾಚಾರ್ಯ ರವರ ಪರಿಚಯದ ವೀಡಿಯೋ ತೋರಿಸುತ್ತ ಅವರ ಸ್ಥಳ,ಕಾಲ,ಕೃತಿಗಳು,ಅವರಿಗೆ ದೊರೆತ ಪ್ರಶಸ್ತಿ ಇತ್ಯಾದಿ ಅವರ ಪರಿಚಯವನ್ನು ಭಾವಚಿತ್ತರ ತೋರಿಸುತ್ತ ಕಪ್ಪು ಹಲಗೆ ಮೇಲೆ ಬರೆಸುವುದು(ಇ–1) ಮತ್ತು ವಿದ್ಯಾರ್ಥಿಯೊಬ್ಬಳಿಂದ ತಾನೇ ವಿದ್ಯಾವಾಚಸ್ಪತಿ ಡಾ. ಬನ್ನಂಜೆ ಗೋವಿಂದಾಚಾರ್ಯ ತನ್ನ ಪರಿಚಯವನ್ನು ಸಂದರ್ಶನ ವಿಧಾನದ ಮೂಲಕ ಪರಿಚಯ ಮಾಡಿಕೊಳ್ಳುವ ಚಟುವಟಿಕೆ ಮಾಡಿಸುವುದು(ಇ–1)(ಇ–3)(ಇ–4) | ವೀಕ್ಷಣೆ<br><br>ಪ್ರಶ್ನೋತ್ತರ<br><br>ವೀಕ್ಷಣೆ<br><br>ವೀಕ್ಷಣೆ<br><br>ಸಂದರ್ಶನ<br><br>ಅವಲೋಕನ | ಅವಲೋಕನ<br><br>ಪ್ರಶ್ನಾಕೋಶ<br><br>ಅವಲೋಕನ<br><br>ವೀಡಿಯೋ<br><br>ಕವಿ ವಿದ್ಯಾರ್ಥಿ<br><br>ತಪಶೀಲುಪಟ್ಟಿ | 1.ದುಡ್ಡಿರುವ ವ್ಯಕ್ತಿಯಲ್ಲಿ ಮನೆಮಾಡುವ ದುರ್ಗುಣಗಳಾವುವು ?<br><br>2.ಅರಮನೆಯಲ್ಲಿ ಎಂತಹ ಮಂತ್ರಿಗಳಿರಬೇಕು ?<br><br>3. ಶುಕನಾಸ ಯಾರು ?<br><br>4. ಯಾರ ಕಿವಿಗೆ ಉಪದೇಶ ನಾಟುವುದಿಲ್ಲ ?<br><br>5. ಬನ್ನೆಂಜೆ ಗೋವಿಂದಚಾರ್ಯರ ಜನ್ನ ಸ್ಥಳ ಯಾವುದು ? |

| | | | | | |
|---|---|---|---|---|---|
| | 3.ರಾಜ ಮನೆತನ ಮತ್ತು ಗುರೂಪದೇಶ<br><br>4.ಸಂಪತ್ತಿನ ಸಹಚಾರಿಗಳು<br><br>5.ದುಡ್ಡು ಮತ್ತು ಅದರ ನಿಜರೂಪ<br><br>6.ಭಾಷಾ ಚಟುವಟಿಕೆಗಳು | ಹಣವು ಅನರ್ಥಗಳನ್ನು ಸೃಷ್ಟಿಸುತ್ತದೆ ಎಂಬುದನ್ನು ಹಲವು ಮಹಾತ್ಮರು ಹೇಳಿಕೆಗಳನ್ನು ತೋರಿಸುತ್ತ ಗುರುವಿನ ಉಪದೇಶದ ಮಹತ್ತ್ವವನ್ನು ಚರ್ಚಿಸುವುದು.(ಇ–1,ಇ–2,ಇ–3)<br><br>ರಾಜಮನೆತನದಲ್ಲಿದ್ದ ಗುರುಗಳ ಮತ್ತು ಅವರ ಉಪದೇಶಗಲನ್ನು ತಿಳಿಸುತ್ತ ಪಾಠವನ್ನು ಅರ್ಥೈಸುವುದು. ಉದಾ ಹರಿಶ್ಚಂದ್ರನಿಗೆ ವಸಿಷ್ಠರ ಉಪದೇಶ.(ಇ1)<br><br>ಅಮೃತಕ್ಕಾಗಿ ದೇವರ ಮತ್ತು ರಾಕ್ಷಸರು ಸಮುದ್ರಮಥನ ಮಾಡುವಾಗ ಮೇಲೆ ಬಂದ ವಸ್ತುಗಳ ಕುರಿತು ಚರ್ಚಿಸುತ್ತ, ವಿಡಿಯೋ ತೋರಿಸುತ್ತ, ಲಕ್ಷ್ಮಿಯ ಸಹಚಾರಿ ಗುಣಗಳ ಬಗ್ಗೆ ವಿವರಿಸುವುದು.(ಇ–1, ಇ–2)<br><br>ಚಿನ್ನದ ಮೊಟ್ಟೆ ಇಡುವ ಕೋಳಿಯ ಕಥೆ, ಮಹಿದಾಸನ ಕಥೆಗಳನ್ನು ಹೇಳುತ್ತ ದುಡ್ಡಿನ ನಿಜರೂಪ ಎಂಥಹದ್ದು ಎಂಬುದನ್ನು ಚರ್ಚಿಸುತ್ತ ವಿವರಿಸುವುದು.(ಇ–1,ಇ–2,ಇ–5)<br><br>ತರಗತಿಯಲ್ಲಿ ವಿದ್ಯಾರ್ಥಿಗಳಿಂದ ಭಾಷಾ ಚಟುವಟಿಕೆಗಳನ್ನು ಮಾಡಿಸುವುದು. (ಇ–1) (ಇ–3) | ವೀಕ್ಷಣೆ<br><br>ವಿಡಿಯೋ<br><br>ಚರ್ಚೆ | ಅವಲೋಕನ<br><br>ಅವಲೋಕನ<br><br>ಪ್ರಶ್ನಾಕೋಶ | 6.ಕಿವಿಗೆ ಹಿತವಚನ ಹೊಕ್ಕಾಗ ಸಂಕಟಪಡುವವರು ಯಾರು ?<br><br>7.ಕೊಳೆಯನ್ನು ತೊಳೆಯುವವರು ಯಾರು ?<br><br>8.ಲಕ್ಷ್ಮಿ ಹೊತ್ತು ತಂದ ದುರ್ಗಣಗಳು ಯಾವುವು?<br><br>9.ಯಾರ್‍ಯಾರನ್ನು ಕಂಡರೆ ಸಂಪತ್ತಿಗೆ ಆಗಿಬರುವುದಿಲ್ಲ? |

**ವಿಷಯ ಶಿಕ್ಷಕರ ಸಹಿ** **ಮುಖ್ಯಶಿಕ್ಷಕರ ಸಹಿ**

ವಿಷಯ : ಪ್ರಥಮ ಭಾಷೆ ಕನ್ನಡ — ಪಾಠ ಯೋಜನೆ — ತರಗತಿ : 10

**ಪಾಠದ ಶೀರ್ಷಿಕೆ : ಪದ್ಯ–11.ಹಲಗಲಿ ಬೇಡರು (ಜಾನಪದ ಲಾವಣಿ)** — ದಿನಾಂಕ — ರಿಂದ — ವರೆಗೆ

**ಬೋಧನೆಯ ಉದ್ದೇಶಗಳು** : 1.ಜನಪದ ಸಾಹಿತ್ಯದ ಮಹತ್ವವನ್ನು ತಿಳಿಸುವುದು
2.ದೇಶಭಕ್ತಿ,ತ್ಯಾಗ,ಬಲಿದಾನ,ಪರೋಪಕಾರ ಮುಂತಾದ ಗುಣಗಳನ್ನು ಬೆಳೆಸುವುದು.
3.ಅನಕ್ಷರಸ್ಥರಲ್ಲಿದ್ದ ಅಪ್ರತಿಮಾ ದೇಶಪ್ರೇಮವನ್ನು ಪ್ರಶಂಸಿಸುವುದು.

**ಕಲಿಕಾ ಸಾಮಗ್ರಿಗಳು :** ಜನಪದ ಗೀತೆಗಳ ಪುಸ್ತಕಗಳು,ಜನಪದ ಲಾವಣಿಗಳ ಪುಸ್ತಕಗಳು , ಜನಪದ ಗೀತೆಗಳ ಆಡಿಯೋ ,ಹಲಗಲಿ ಬೇಡರು ಲಾವಣಿ ಆಡಿಯೋ ಮತ್ತು ವೀಡಿಯೋ ಚಂದನ ವಿಡಿಯೋ ಪಾಠ.

| ಅವಧಿ | ಉಪಘಟಕಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | |
|---|---|---|---|---|---|
| | | | ತಂತ್ರಗಳು | ಸಾಧನಗಳು | ಪ್ರಶ್ನಾಕೋಶ (ಇ–5) |
| 6 | 1.ಜನಪದ ಸಾಹಿತ್ಯ ಪರಿಚಯ<br><br>2.ಬ್ಯಾಡರ ಹುಡುಗರ ವಚನ<br><br>3.ಹಲಗಲಿ ತಳದ ಮ್ಯಾಗ ಸಾಹೇಬನ ಸೈನ್ಯ<br><br>4.ಬ್ರಿಟೀಷ್ ಸೈನ್ಯದ ಮೇಲೆ ಬೇಡರ ಬೇಟೆ<br><br>5.ಬೆಂಕಿಯಾದ ಕಾರಸಾಹೇಬ | **ಪ್ರೇರಣಾ ಚಟುವಟಿಕೆ:**<br>ಜನಪದ ಗೀತೆ,ಜನಪದ ತ್ರಿಪದಿಗಳನ್ನು ಹಾಡು ವುದು, ವಿದ್ಯಾರ್ಥಿಗಳಿಗೆ ಗೊತ್ತಿರುವ ಜನಪದ ಗೀತೆ,ಜನಪದ ತ್ರಿಪದಿಗಳನ್ನು ಹಾಡಿಸುವುದು ಪುಸ್ತಕದಲ್ಲಿರುವ ಜನಪದ ಗೀತೆ,ಜನಪದ ತ್ರಿಪದಿ ಗಳನ್ನು ಲಾವಣಿಗಳನ್ನು ಹಾಡಿಸುವುದು(ಇ–1) ಆ ಮೂಲಕ ಜನಪದ ಸಾಹಿತ್ಯದ ಪರಿಚಯ<br><br>**ಪಾಠ ಪ್ರಕ್ರಿಯೆಗಳು**<br>ವಿದ್ಯಾರ್ಥಿಗಳಿಂಧ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ವಿಷಯದ ಸೆಮಿನಾರ್ ಮಾಡಿಸುವುದು(ಇ–1,–3) ,ಸಂಗ್ರಾಮದಲ್ಲಿ ಭಾಗವಹಿಸಿದ ಹೋರಾಟಗಾರರ ಪಟ್ಟಿ ಮಾಡಿಸಿ ಅವರ ಮಾಹಿತಿ ಸಂಗ್ರಹಿಸುವ ಚಟುವಟಿಕೆ ನೀಡುವುದು. (ಇ–3)<br>ಹಿನ್ನಲೆಯನ್ನು ಹೇಳುವುದು,ಅದರಲ್ಲಿ ಹಲಗಲಿ ಬೇಡರ ದಂಗೆಗೆ ಕಾರಣವನ್ನು ಕುರಿತು ವಿವರಿಸುವುದು, ಆ ವಿಷಯವನ್ನು ಒಳಗೊಂಡಿರುವ ಹಲಗಲಿ ಲಾವಣಿಯನ್ನು ಪರಿಚಯಿಸುವುದು,ಲಾವಣಿಯನ್ನು ರಾಗವಾಗಿ ಹಾಡುವುದು,ಧ್ವನಿ ಸುರುಳಿ ಕೇಳಿಸುವುದು, ವಿದ್ಯಾರ್ಥಿಗಳಿಂದ ಸಾಮೂಹಿಕವಾಗಿ ಹಾಡಿಸು ವುದು (ಇ–1) | ಹಾಡಿಸುವುದು<br><br>ಆಡಿಯೋ ಕೇಳಿಸುದು<br><br>ಸೆಮಿನಾರ್<br><br>ಮಾಹಿತಿ ಸಂಗ್ರಹ<br><br>ಪ್ರಶ್ನೋತ್ತರ<br><br>ಆಡಿಯೋ ಕೇಳಿಸುವುದು | ಜನಪದಗೀತೆಗಳ ಪುಸ್ತಕ<br><br>ಜನಪದಲಾವಣಿಗಳಪುಸ್ತಕ<br><br>ಧ್ವನಿಸುರುಳಿ<br><br>ಸೆಮಿನಾರ್ ವಿಷಯ ಪತ್ರ<br>ಸ್ವಾತಂತ್ರ್ಯ ಹೋರಾಟಗಾರ ಪುಸ್ತಕ<br><br>ಪ್ರಶ್ನಾಕೋಶ<br><br>ಧ್ವನಿಸುರುಳಿ | 1) ಜನಪದ ಸಾಹಿತ್ಯ ಎಂದರೇನು ?<br><br>2) ಲಾವಣಿಗಳನ್ನು ವೀರಗೀತೆಗಳೆಂದು ಏಕೆ ಕರೆಯಲಾಗುತ್ತೆ ?<br><br>3) ಹಲಗಲಿ ದಂಗೆಗೆ ಕಾರಣವೇನು ?<br><br>4) ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಯಾವಾಗ ನಡೆಯಿತು ?<br><br>5) ಹಲಹಲಿ ಲಾವಣಿಗೆ ಕಾರಣರಾದ ಹುಡುಗರು ಯಾರು ?<br><br>6) ಕಾರಕೂನ ಸಾಹೇಬಗ ಯಾವ ವಿಷಯ ತಲುಪಿತು ? |

| | | | | | |
|---|---|---|---|---|---|
| | 6.ಬ್ಯಾಡರ ಹುಡುಗರ ಕಸರತ್ತು<br><br>7.ಹಲಗಲಿ ಲೂಟಿ<br><br>8.ಭಾಷಾ ಚಟುವಟಿಕೆ | ಹಲಗಲಿ ಬೇಡರು ಲಾವಣಿ ವೀಡಿಯೋವನ್ನು ತೋರಿಸುವುದು.<br>ಸಾರಾಂಶವನ್ನು ಬರೆಯಲು ಪ್ರೇರೇಪಿಸುವುದು, ಓದಿಸುವುದು(ಇ–1) (ಇ–3)<br><br>ಆ ಮೂಲಕ ಲಾವಣಿಯನ್ನು ಪ್ರಶ್ನೋತ್ತರ ವಿಧಾನದ ಮೂಲಕ ಅರ್ಥೈಸುವುದು<br><br>ಲಾವಣಿಯಲ್ಲಿ ಬಂದಿರುವ ಪಾತ್ರಗಳಿಗನುಗುಣವಾಗಿ ಸಾಹಿತ್ಯ ರಚಿಸಿಕೊಂಡು ನಾಟಕ ರೂಪದಲ್ಲಿ ಅಭಿನಯಿಸುವಂತೆ ಪ್ರೇರೇಸುವುದು,(ಇ–1)(ಇ–3) ಹೋರಾಟದ ಮನೋಭಾವಗಳನ್ನು ಬೆಳೆಸಿಕೊಳ್ಳುವಂತೆ ವಿದ್ಯಾರ್ಥಿಗಳಲ್ಲಿ ಪ್ರೇರೇಪಿಸುವುದು ((ಇ–4)<br>ಪ್ರಶ್ನೋತ್ತರ ಚರ್ಚೆ ಮಾಡುವುದು<br><br>ಕಂಠಪಾಠ ಮಾಡಿಸಿ ಲಾವಣಿಯನ್ನು ಸಾಮೂಹಿಕವಾಗಿ ಹಾಡಿಸುವುದು.(ಚಟುವಟಿಕೆ) (ಇ–1) | ವೀಡಿಯೋ ತೋರಿಸುವುದು<br>ಓದಿಸುವುದು<br><br>ಪ್ರಶ್ನೋತ್ತರ<br><br>ಅಭಿನಯ<br><br>ಚರ್ಚೆ<br><br>ಹಾಡಿಸುವುದು | ವೀಡಿಯೋ<br>ಸಾರಾಂಶ<br><br>ಪ್ರಶ್ನಾಕೋಶ<br><br>ನಾಟಕ ರೂಪದ ಸಾಹಿತ್ಯ<br><br>ಪ್ರಶ್ನಾಕೋಶ<br><br>ಲಾವಣಿ | 7) ಬ್ಯಾಡರ ಹುಡುಗರಿಗೆ ಬುದ್ಧಿ ಮಾತು ಹೇಳಿದವರು ಯಾರು ?<br><br>8) ಹಲಗಲಿ ಗುರುತು ಉಳಿಯದಂತಾದುದು ಏಕೆ ? |

**ವಿಷಯ ಶಿಕ್ಷಕರ ಸಹಿ** **ಮುಖ್ಯಶಿಕ್ಷಕರ ಸಹಿ**

| ವಿಷಯ : ಪ್ರಥಮ ಭಾಷೆ ಕನ್ನಡ | ಪಾಠ ಯೋಜನೆ | ತರಗತಿ : 10 |
|---|---|---|

**ಪಾಠದ ಶೀರ್ಷಿಕೆ : ಗದ್ಯ:4. ಭಾಗ್ಯಶಿಲ್ಪಿಗಳು (ನಾಲ್ವಡಿ ಕೃಷ್ಣರಾಜ ಒಡೆಯರ್,ಸರ್.ಎಂ.ವಿಶ್ವೇಶ್ವರಯ್ಯ) (ಡಿ.ಎಸ್.ಜಯಪ್ಪಗೌಡ) ದಿನಾಂಕ ರಿಂದ ವರೆಗೆ**

**ಬೋಧನೆಯ ಉದ್ದೇಶಗಳು** : 1.ಜೀವನ ಚರಿತ್ರೆ,ಆತ್ಮಕತೆಗಳ ಅಧ್ಯಯನದ ಬಗ್ಗೆ ಆಸಕ್ತಿ ಮೂಡಿಸುವುದು.
2.ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಸರ್.ಎಂ.ವಿಶ್ವೇಶ್ವರಯ್ಯನವರ ಸಾಧನೆ ಮತ್ತು ಆದರ್ಶಗಳನ್ನು ಅರಿತುಕೊಳ್ಳುವುದು.
3.ಪರಿಶ್ರಮ, ಪ್ರತಿಭೆ, ನಿಷ್ಠೆ,ಧ್ಯೇಯ, ದೃಢಸಂಕಲ್ಪಗಳಿದ್ದರೆ ಯಶಸ್ಸು ಪಡೆಯಬಹುದೆಂಬುದನ್ನು ತಿಳಿಸುವುದು.

**ಕಲಿಕಾ ಸಾಮಗ್ರಿಗಳು :** ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಸರ್.ಎಂ.ವಿಶ್ವೇಶ್ವರಯ್ಯನವರ ಭಾವಚಿತ್ರ,ಸಾಧಕರ ಚಿತ್ರಗಳು ,ಪ್ರಶ್ನಾವಳಿ , ಸಾಧಕರ ಹೆಸರುಗಳ ಕಾರ್ಡುಗಳು ,ಜೀವನ ಚರಿತ್ರೆ,ಆತ್ಮಕತೆಗಳಪುಸ್ತಕ, ವಿಶ್ವೇಶ್ವರಯ್ಯನವರ ಸಾಧನೆ ತೋರಿಸುವ ವೀಡಿಯೋಗಳು, ಕರ್ನಾಟಕ ಭೂಪಟ

| ಅವಧಿ | ಉಪಘಟಕಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | |
|---|---|---|---|---|---|
| | | | ತಂತ್ರಗಳು | ಸಾಧನಗಳು | ಪ್ರಶ್ನಾಕೋಶ (ಇ–5) |
| 8 | 1.ಕವಿ–ಕಾವ್ಯ ಪರಿಚಯ<br><br>2.ನಾಲ್ವಡಿ ಕೃಷ್ಣರಾಜ ಒಡೆಯರು<br><br>3.ಮಾದರಿ ಮೈಸೂರು ಮತ್ತು ಪ್ರಜಾಪ್ರತಿನಿಧಿ ಸಭೆ,ನ್ಯಾಯ ವಿಧೇಯಕ ಸಭೆ | **ಪ್ರೇರಣಾ ಚಟುವಟಿಕೆ:**<br>ಸಂದರ್ಶನ ವಿಧಾನದ ಮೂಲಕ ಕವಿ ಪರಿಚಯ ಮಾಡಿಸುವುದು. (ಇ–1)<br>ಕರ್ನಾಟಕವನ್ನು ಆಳಿದ ರಾಜಮನೆತನಗಳು, ರಾಜರ ಹೆಸರುಗಳನ್ನು ಪಟ್ಟಿ ಮಾಡಿಸುವುದು ಆ ಮೂಲಕ ನಾಲ್ವಡಿ ಕೃಷ್ಣರಾಜ ಒಡೆಯರ್ ಪರಿಚಯಿಸುವುದು(ಇ–2) (ಇ–3)<br><br>ಪ್ರತಿಯೊಬ್ಬ ವಿದ್ಯಾರ್ಥಿಗೆ ಒಬ್ಬೊಬ್ಬ ಸಾಧಕರ ಚಿತ್ರ,ಮತ್ತೊಷ್ಟು ವಿದ್ಯಾರ್ಥಿಗಳಿಗೆ ಸಾಧಕರ ಹೆಸರಿನ ಕಾರ್ಡುಗಳು, ಮತ್ತೊಷ್ಟು ವಿದ್ಯಾರ್ಥಿಗಳಿಗೆ ಸಾಧಕರ ಜೀವನಚರಿತ್ರೆಯ ಪುಸ್ತಕಗಳನ್ನು ನೀಡುವುದು. ಚಿತ್ರ ಮತ್ತು ಸಾಧಕರ ಹೆಸರು ಹೊಂದಿಸುವಂತೆ ತಿಳಿಸುವುದು, ಮತ್ತು ಅವರ ಜೀವನಚರಿತ್ರೆ ಪಡೆದಿರುವ ವಿದ್ಯಾರ್ಥಿಗಳಿಂದ ಅವರ ಪರಿಚಯ ಮಾಡುವಂತೆ ಪ್ರೇರೇಪಿಸುವುದು, ಮತ್ತು ಸರ್.ಎಂ.ವಿರವರ ಜೀವನ ಪರಿಚಯಿಸುವುದು. (ಇ–1)(ಇ–2) (ಇ–3)<br>**ಪಾಠಪ್ರಕ್ರಿಯೆಗಳು**<br>ಪಾಠವನ್ನು ಗಟ್ಟಿಯಾಗಿ ಸ್ವರಭಾರದೊಂದಿಗೆ ಓದುವುದು, ವಿದ್ಯಾರ್ಥಿಗಳಿಂದ ಗಟ್ಟಿಯಾಗಿ ಓದಿಸುವುದು,ಮೌನವಾಚನ ನೀಡುವುದು, | ಸಂದರ್ಶನ<br><br>ರಾಜ ಮನೆತನ ಮತ್ತು ರಾಜರ ಪಟ್ಟಿ ತಯಾರಿ<br><br>ಸಾಧಕರನ್ನು ಗುರುತಿಸುವುದು<br><br>ಸಾಧಕರ ಪರಿಚಯ<br><br>ಪ್ರಶ್ನೋತ್ತರ | ಪ್ರಶ್ನಾವಳಿ<br><br>ಕರ್ನಾಟಕ ಇತಿಹಾಸ ಪುಸ್ತಕಗಳು<br><br>ಸಾಧಕರ ಹೆಸರುಗಳ ಕಾರ್ಡುಗಳು<br><br>ಜೀವನ ಚರಿತ್ರೆ, ಆತ್ಮಕತೆಗಳ ಪುಸ್ತಕ<br><br>ಪ್ರಶ್ನಾಕೋಶ | 1)ಡಿ.ಎಸ್.ಜಯಪ್ಪಗೌಡರ ಸ್ಥಳ,ಕಾಲ,ಕೃತಿಗಳನ್ನು ಹೆಸರಿಸಿ<br><br>2) ಕರ್ನಾಟಕವನ್ನು ಆಳಿದ ರಾಜ ಮನೆತನಗಳಾವಾವು ?<br><br>3) ಮೈಸೂರು ಸಂಸ್ಥಾನದ ಪ್ರಮುಖ ರಾಜರುಗಳು ಯಾರ್‍ಯಾರು ?<br><br>3) ನಾಲ್ವಡಿ ಕೃಷ್ಣರಾಜ ಒಡೆಯರ್ ಯಾವಾಗ ಪಟ್ಟಾಭಿಷಿಕ್ತರಾದರು ?<br><br>4) ಮೈಸೂರು ಸಂಸ್ಥಾನ ಮಾದರಿ ಮೈಸೂರು ಎನಿಸಿಕೊಂಡಿದ್ದು ಯಾವ ರಾಜರ ಕಾಲದಲ್ಲಿ ?<br><br>5) ಪ್ರಜಾ ಪ್ರತಿನಿಧಿ ಸಭೆಯನ್ನು ಶಾಸನ ಬದ್ಧ ಸಂಸ್ಥೆಯನ್ನಾಗಿ ಮಾರ್ಪಡಿಸಿದವರು ಯಾರು ? |

| | | | | | |
|---|---|---|---|---|---|
| | 4.ನಾಲ್ವಡಿ ಕೃಷ್ಣರಾಜ ಒಡೆಯರ ಕೊಡುಗೆ<br><br>5.ವಿಶ್ವೇಶ್ವರಯ್ಯನವರ ಬಗ್ಗೆ ನೆಹರುರವರ ಅಭಿಮಾನದ ನ್ಮಡಿಗಳು<br><br>6.ಸರ್.ಎಂ.ರವರ ಬಾಲ್ಯಜೀವನ<br>7.ಸರ್.ಎಂ.ವಿ ರವರ ಶಿಕ್ಷಣ<br>8.ಮುಂಬೈ ಮತ್ತು ಪೂನಾ ನಗರಗಳಲ್ಲಿ ಸರ್.ಎಂ.ವಿರವರ ಸೇವೆ<br>8.ಮೈಸೂರು ಸಂಸ್ಥಾನದಲ್ಲಿ ಇಂಜಿನಿಯರ್<br>9.ದಿವಾನ ಸರ್.ಎಂ.ವಿರವರು<br>10.ಸರ್.ಎಂ.ವಿರವರ ದಿವಾನ ರಾಗಿ ಸಾಧನೆಗಳು<br>11.ಸರ್.ಎಂ.ವಿರವರು ಹೇಳಿದ ಶಿಕ್ಷಣದ ಮಹತ್ವ<br>12.ಗೊಮ್ಮಟ ವ್ಯಕ್ತಿತ್ವದ ದಾರ್ಶನಿಕ ಸರ್.ಎಂ.ವಿ | ನಂತರ ಪ್ರಶ್ನೋತ್ತರ ವಿಧಾನದ ಮೂಲಕ ನಾಲ್ವಡಿ ಕೃಷ್ಣರಾಜ ಒಡೆಯರ ಸಾಧನೆ ಗಳನ್ನು ಪಟ್ಟಿ ಮಾಡಿಸುವುದು,ಓದಿಸುವುದು,ವಿವರಿಸುವುದು.(ಇ–1)<br><br>ಶಾಲಾ ಮಂತ್ರಿ ಮಂಡಲ ಸಭೆ ಏರ್ಪಡಿಸಿ ಅದರ ಕಾರ್ಯ ವೈಖರಿಯ ಬಗ್ಗೆ ಅರಿವು ಮೂಡಿಸುವುದು (ವಿದ್ಯಾರ್ಥಿ ಪ್ರಜಾಪ್ರತಿನಿಧಿ ಸಭೆ ) (ಇ–1) (ಇ–4)<br>ಶಿವನ ಸಮುದ್ರ ಜಲಪಾತ ಮತ್ತು ಜಲವಿದ್ಯುತ್ ಉತ್ಪಾದನಾ ಕೇಂದ್ರದ ವೀಡಿಯೋ ತೋರಿಸುತ್ತ ವಿವರಿಸುವುದು.<br><br>ಸರ್.ಎಂ.ವಿ ರವರ ಸಾಧನೆಗಳನ್ನು ವಿವರಿಸುವ ವೀಡಿಯೋಗಳ ಮತ್ತು ಚಿತ್ರಪಟಗಳನ್ನು ತೋರಿಸುತ್ತ ಅವರ ಬಾಲ್ಯಜೀವನ ಶಿಕ್ಷಣ ಮುಂಬೈ ಮತ್ತು ಪೂನಾ ನಗರಗಳಲ್ಲಿ ಸರ್.ಎಂ.ವಿರವರ ಸೇವೆ ಕುರಿತು ವಿವರಣೆ.<br><br>ಮೈಸೂರು ಸಂಸ್ಥಾನದಲ್ಲಿ ಇಂಜಿನಿಯರ್ ಆಗಿ ಸರ್.ಎಂ.ವಿರವರ ಸೇವೆ ವಿದ್ಯಾರ್ಥಿಗಳಿಂದ ಭಾಷಣ<br><br>ಸರ್.ಎಂ.ವಿರವರ ದಿವಾನರಾಗಿ ಸಾಧನೆಗಳ ಪಟ್ಟಿ ಮಾಡಿವ ಚಟುವಟಿಕೆ ನೀಡುವುದು(ಇ–1) (ಇ–2)<br><br>ಸರ್.ಎಂ.ವಿರವರು ಹೇಳಿದ ಶಿಕ್ಷಣದ ಮಹತ್ವಗಳನ್ನು ಕುರಿತು ವಿವರಿಸುವುದು.ಅವರ ಸಾಹಿತ್ಯ ಸೇವೆಯ ಚಿತ್ರಪಟ ತಯಾರಿಸುವ ಚಟುವಟಿಕೆ ನೀಡುವುದು. (ಇ–1) (ಇ–2) | ಪ್ರಜಾಪ್ರತಿನಿಧಿ ಸಭೆ<br><br>ವೀಕ್ಷಣೆ<br><br>ವೀಕ್ಷಣೆ<br><br>ಭಾಷಣ<br><br>ಬರವಣಿಗೆ<br><br>ಚಿತ್ರಪಟ ತಯಾರಿ<br><br>ಆಶುಭಾಷಣ | ಶಾಲಾ ಮಂತ್ರಿ ಮಂಡಲ<br><br>ವೀಡಿಯೋ<br><br>ವೀಡಿಯೋ ಚಿತ್ರಪಟಗಳು<br><br>ಭಾಷಣ ಸಾಹಿತ್ಯ<br><br>ಎಂ.ವಿರವರ ಸಾಧನೆಗಳ ಪಟ್ಟಿ<br><br>ಚಿತ್ರಗಳು ಡ್ರಾಯಿಂಗ್ ಶೀಟ್<br><br>ಅವಲೋಕನ | 6) ನ್ಯಾಯ ವಿಧಾಯಕ ಸಭೆಯನ್ನು ಸ್ಥಾಪಿಸಿದವರು ಯಾರು ?<br>7) ಸಾಮಾಜಿಕ ಕಾನೂನುಗಳ ಹರಿಕಾರ ಎಂದು ಕರೆಸಿಕೊಂಡವರು ಯಾರು ?<br>8) ಏಷ್ಯಾ ಖಂಡದ ಮೊದಲ ಜಲವಿದ್ಯುತ್ ಯೋಜನೆ ಯಾವುದು ?<br><br>9) ಭಾರತ ರತ್ನ ಪ್ರಶಸ್ತಿ ಪಡೆದ ಐದು ಸಾಧಕರನ್ನು ಹೆಸರಿಸಿ.<br>10) ಭಾರತ ರತ್ನ ಪ್ರಶಸ್ತಿ ಪಡೆದ ಮೈಸೂರಿನ ದಿವಾನರು ಯಾರು ?<br>11) ಸರ್.ಎಂ.ವಿಶ್ವೇಶ್ವರಯ್ಯನವರ ಶತಮಾನೋತ್ಸವ ಸಂಭ್ರಮ ಎಲ್ಲಿ ನಡೆಯಿತು ?<br>12) ಸರ್.ಎಂ.ವಿಶ್ವೇಶ್ವರಯ್ಯನವರ ಶತಮಾನೋತ್ಸವ ಸಂಭ್ರಮದಲ್ಲಿ ಭಾಗವಹಿಸಿದ್ದ ಪ್ರಧಾನಿ ಯಾರು?<br>13) ಸರ್.ಎಂ.ವಿಶ್ವೇಶ್ವರಯ್ಯನವರು ಸ್ವಯಂಚಾಲಿತ ಬಾಗಿಲುಗಳನ್ನು ಯಾವ ಜಲಾಶಯಗಳಿಗೆ ಅಳವಡಿಸಿದರು ?<br>14) ಸರ್.ಎಂ.ವಿಶ್ವೇಶ್ವರಯ್ಯನವರನ್ನು ದಿವಾನರನ್ನಾಗಿ ಮಾಡಿದ ಅರಸು ಯಾರು ?<br>15) ಕ.ಸಾ.ಪ ಸ್ಥಾಪಕರು ಯಾರು ?<br>16) ಸರ್.ಎಂ.ವಿಶ್ವೇಶ್ವರಯ್ಯನವರ ಕೈಗಾರಿಕಾ ಘೋಷಣೆ ಏನು ?<br>17) ಸರ್.ಎಂ.ವಿಶ್ವೇಶ್ವರಯ್ಯನವರ ಆತ್ಮಕಥೆ ಯಾವುದು ? |

**ವಿಷಯ ಶಿಕ್ಷಕರ ಸಹಿ** **ಮುಖ್ಯಶಿಕ್ಷಕರ ಸಹಿ**

| ವಿಷಯ : ಪ್ರಥಮ ಭಾಷೆ ಕನ್ನಡ | ಪಾಠ ಯೋಜನೆ | ತರಗತಿ : 10 |
|---|---|---|
| **ಪಾಠದ ಶೀರ್ಷಿಕೆ : ಪದ್ಯ–12. ಕೌರವೇಂದ್ರನ ಕೊಂದೆ ನೀನು (ಕುಮಾರವ್ಯಾಸ)** | **ದಿನಾಂಕ ರಿಂದ** | **ವರೆಗೆ** |

**ಬೋಧನೆಯ ಉದ್ದೇಶಗಳು :** 1.ಜೀವನದಲ್ಲಿ ಪರಸ್ಪರ ಹೊಂದಾಣಿಕೆ ಮತ್ತು ಸಾಮರಸ್ಯದ ಬದುಕು ಆಪೇಕ್ಷಣೀಯವಂಬುದನ್ನು ತಿಳಿಸುವುದು.
2.ಮಹಾಭಾರತದ ಪಾತ್ರಗಳಲ್ಲಿನ ಉತ್ತಮ ಮೌಲ್ಯಗಳನ್ನು ಬೆಳೆಸುವುದು
3.ಕರ್ಣನ ಸ್ವಾಮಿನಿಷ್ಠೆ,ಕೃಷ್ಣನ ಧರ್ಮಕ್ಷಮತೆಯ ಮಹತ್ವವನ್ನು ಅರಿಯುವುದು

**ಕಲಿಕಾ ಸಾಮಗ್ರಿಗಳು :** ಕುಮಾರವ್ಯಾಸನ ಭಾವಚಿತ್ರ,ಆಕಾರ ಗ್ರಂಥ,ಕುಮಾರವ್ಯಾಸ ನಿಘಂಟು, ಪ್ರಶ್ನಾಕೋಶ, ಕೃಷ್ಣ–ಕರ್ಣರು ರಥವೇರಿದ ಕಾಲ್ಪನಿಕ ಚಿತ್ರ, ಕರ್ಣ ಮತ್ತು ಕೃಷ್ಣರ ಸಂಭಾಷಣೆಯ ಅನಿಮೇಶನ್ ವೀಡಿಯೋ, ಮಹಾಭಾರತ ಪಾತ್ರಪರಿಚಯ ಪುಸ್ತಕ,

| **ಅವಧಿ** | **ಉಪಘಟಕಗಳು** | **ಕಲಿಕಾ/ಬೋಧನಾ ಚಟುವಟಿಕೆಗಳು** | **ಮೌಲ್ಯಮಾಪನ** | | |
|---|---|---|---|---|---|
| | | | **ತಂತ್ರಗಳು** | **ಸಾಧನಗಳು** | **ಪ್ರಶ್ನಾಕೋಶ (ಇ–5)** |
| 5 | 1.ಕುಮಾರವ್ಯಾಸನ ಪರಿಚಯ<br><br>2.ಪೂರ್ವಕತೆ<br><br>3.ಕರ್ಣನನ್ನು ಬರಸೆಳೆದ ಕೃಷ್ಣ<br><br>4.ರವಿಸುತನ ಕಿವಿಯಲಿ ಉಭಯ<br><br>5.ಭಿತ್ತಿದ ದಾನವಸೂದನ<br><br>6.ಮಂತ್ರಮಹಿಮೆ | **ಪ್ರೇರಣಾ ಚಟುವಟಿಕೆ**<br>ಹಳಗನ್ನಡ ನಡುಗನ್ನಡ ಕವಿಗಳನ್ನು ಪಟ್ಟಿಮಾಡಿಸುವುದು. (ಇ–2) ಕನ್ನಡದಲ್ಲಿ ಮಹಾಭಾರತ ಕತೆಗಳನ್ನು ಬರೆದ ಕವಿಗಳನ್ನು ವಿಂಗಡಿಸುವುದು ಆ ಮೂಲಕ ಕುಮಾರವ್ಯಾಸ ಕವಿಯ ವಿವರಗಳನ್ನು ವಿದ್ಯಾರ್ಥಿಗಳಿಂದ ಕಪ್ಪು ಹಲಗೆ ಮೇಲೆ ಬರೆಯಿಸಿ ಓದಿಸಿ ಪರಿಚಯಿಸುವುದು. (ಇ–1) (ಇ–2) ಮಹಾಭಾರತದಲ್ಲಿ ಬರುವ ಪಾತ್ರಗಳನ್ನು ಪಟ್ಟಿಮಾಡಿಸಿ, ಬರೆಸಿ ಅವರಿಗೆ ಗೊತ್ತಿರುವ ಪಾತ್ರಗಳ ಬಗ್ಗೆ ಪರಿಚಯಿಸುವಂತೆ ಪ್ರೇರೇಪಿಸುವುದು. (ಇ–3)<br>**ಪಾಠ ಪ್ರಕ್ರಿಯೆಗಳು**<br>ಪೂರ್ವಕತೆಯನ್ನು ಹೇಳಿದ ನಂತರ ಪದ್ಯಭಾಗವನ್ನು ಗಮಕದಲ್ಲಿ ರಾಗವಾಗಿ ಗಟ್ಟಿಯಾಗಿ ಹಾಡುವುದು. ಆಡಿಯೋವನ್ನು ಕೇಳಿಸುವುದು ಪದಬಿಡಿಸಿ ಓದುವುದು ವಿದ್ಯಾರ್ಥಿಗಳಿಂದ ಗಟ್ಟಿಯಾಗಿ ಓದಿಸುವುದು. ಪ್ರಶ್ನೋತ್ತರ ವಿಧಾನದ ಮೂಲಕ ಅರ್ಥೈಸುವುದು.<br><br>ಕರ್ಣ ಮತ್ತು ಕೃಷ್ಣರ ನಡುವಿನ ಸಂಭಾಷಣೆಯ ವೀಡಿಯೋವನ್ನು ತೋರಿಸುವುದು ಆ ಮೂಲಕ ಹೊಸಗನ್ನಡದಲ್ಲಿ ಬರೆಯುವಂತೆ ಪ್ರೇರೇಪಿಸುವುದು. (ಇ–2)<br><br>ಅಭಿನಯದ ಮೂಲಕ ಅರ್ಥೈಸಲು ಪ್ರಯತ್ನಿಸುವುದು. | ಅವಲೋಕನ<br><br>ಬರವಣಿಗೆ ಮೂಲಕ ಕವಿಪರಿಚಯ<br><br>ಪಾತ್ರಪರಿಚಯ<br><br>ಗಮಕ ವಾಚನ ಕೇಳಿಸುವುದು.<br><br>ಪ್ರಶ್ನೋತ್ತರ<br><br>ವೀಕ್ಷಣೆ | ತಪಶೀಲುಪಟ್ಟಿ<br><br>ಕಪ್ಪುಹಲಗೆ<br><br>ಮಹಾಭಾರತ ಪಾತ್ರಪರಿಚಯ ಪುಸ್ತಕ<br><br>ಧ್ವನಿಸುರುಳಿ<br><br>ಪ್ರಶ್ನಾಕೋಶ<br><br>ವೀಡಿಯೋ | 1)ಹಳಗನ್ನಡ ಕವಿಗಳನ್ನು ಹೆಸರಿಸಿ<br><br>2)ರಾಮಾಯಣ ,ಮಹಾಭಾರತದ ಕರ್ತೃಗಳಾರು<br><br>3)ಆದಿಕವಿ ಯಾರು?<br><br>4)ಪಾಂಡುರೈವರನ್ನು ಹೆಸರಿಸಿ.<br><br>5)ಕುಮಾರವ್ಯಾಸನ ಮೂಲ ಹೆಸರೇನು?<br><br>6)ಕುಮಾರವ್ಯಾಸನ ಬಿರುದು ಯಾವುದು ?<br><br>7)ಕೃಷ್ಣನು ರಥದಲ್ಲಿ ಯಾರನ್ನುಕೂರಿಸಿಕೊಂಡನು<br><br>8)ಕೃಷ್ಣ ಯಾರಲ್ಲಿ ಭೇಧವಿಲ್ಲವೆಂದು ಹೇಳಿದನು<br><br>9) ಕುಂತಿಪುತ್ರರಲ್ಲಿ ಮೊದಲಿಗ ಯಾರು ? |

| | | | | | |
|---|---|---|---|---|---|
| | 7.ಕರ್ಣನಿಗೆ ರಾಜ್ಯದ ಆಸೆ ತೋರಿಸಿದ ಮುರಾರಿ<br><br>8.ಕರ್ಣನ ಧರ್ಮಸಂಕಟ<br><br>9.ಕೌರವೇಂದ್ರನ ಕೊಂದೆ ನೀನು<br><br>10.ವೀರರ್ರೈವರನು ನೋಹಿಸಿನು<br><br>11.ಭಾಷಾ ಚಟುವಟಿಕೆ | ಪದ್ಯವನ್ನು ನಾಟಕ ರೂಪಕ್ಕೆ ಪರಿವರ್ತಿಸಿ ವಿದ್ಯಾರ್ಥಿಗಳನ್ನು ಅಭಿನಯಿಸಲು ಪ್ರೇರೇಪಿಸುವುದು(ಇ–1)(ಇ–3).<br><br>ಅಭ್ಯಾಸ ಪ್ರಶ್ನೋತ್ತರಗಳನ್ನು ಚರ್ಚಿಸುವುದು<br><br>ವಿದ್ಯಾರ್ಥಿಗಳಿಗೆ ಪ್ರಾಸ,ಯತಿ ಛಂಧಸ್ಸುಗಳ ವಿವರಣೆ ನೀಡಿ ,ಕಪ್ಪು ಹಲಗೆ ಮೇಲೆ ಪ್ರಾಸ ಪದಗಳನ್ನು ಬರೆಸುವುದು,ಪದ್ಯವನ್ನು ನೀಡಿ ಯತಿಯ ಪ್ರಯೋಗ ಮಾಡಿಸುವುದು. (ಇ–1) (ಇ–2) (ಇ–3)<br><br>ತರಗತಿಯಲ್ಲಿ ಭಾಷಾಚಟುವಟಿಕೆಗಳನ್ನು ಮಾಡಿಸುವುದು(ಇ–1)<br><br>ನಿಗಧಿತ ಪದ್ಯಭಾಗವನ್ನು ಕಂಠಪಾಠ ಮಾಡಿಸಿ ಹೇಳಿಸುವುದು (ಚಟುವಟಿಕೆ) (ಇ–1) (ಇ–3) | ಅಭಿನಯ<br><br>ಅಭಿನಯ<br><br>ಪ್ರಶ್ನೋತ್ತರ<br><br>ಪ್ರಾಸ ಪದಗಳ ಪಟ್ಟಿ<br><br>ಕಂಠಪಾಠ ಮಾಡಿಸುವುದು | ನಾಟಕ ರೂಪದ ಪದ್ಯ<br><br>ಪದ್ಯದ ಹೊಸಗನ್ನಡ ನಾಟಕ ಸಾಹಿತ್ಯ<br><br>ಪ್ರಶ್ನಾಕೋಶ<br><br>ಕಪ್ಪುಹಲಗೆ<br><br>ಪಠ್ಯಪುಸ್ತಕ | 10)ಮಾದ್ರಿಯ ಪುತ್ರರನ್ನು ಹೆಸರಿಸಿ<br><br>11)ಕೃಷ್ಣನು ಕರ್ಣನಿಗೆ ಯಾವ ಘನತೆಯನ್ನು ಮಾಡುತ್ತೆನೆಂದು ಹೇಳಿದನು ?<br><br>12)ಕರ್ಣ ಯಾರಿಗೆ ಕೇಡಾಯಿತೆಂದು ಮನದಲ್ಲಿ ಹೇಳಿಕಂಡನು ?<br><br>13)ಕರ್ಣ ಯಾರನ್ನು ನೋಯಿಸುವುದಿಲ್ಲ ಎಂದು ಹೇಳಿದನು ? |

**ವಿಷಯ ಶಿಕ್ಷಕರ ಸಹಿ** **ಮುಖ್ಯಶಿಕ್ಷಕರ ಸಹಿ**

| ವಿಷಯ : ಪ್ರಥಮ ಭಾಷೆ ಕನ್ನಡ | ಪಾಠ ಯೋಜನೆ | ತರಗತಿ : 10 |
|---|---|---|
| ಪಾಠದ ಶೀರ್ಷಿಕೆ : ಗದ್ಯ–05. ನಿಜವಾದ ಆದರ್ಶ ಪುರುಷ ಯಾರಾಗಿರಬೇಕು (ಕೇಶವ ಬಲಿರಾಮ ಹೆಡಗೇವಾರ) ದಿನಾಂಕ | ರಿಂದ | ವರೆಗೆ |

**ಬೋಧನೆಯ ಉದ್ದೇಶಗಳು** : 1. ವ್ಯಕ್ತಿಗಳಲ್ಲಿನ ಮೌಲ್ಯತತ್ತ್ವಗಳನ್ನು ಆದರ್ಶವಾಗಿ ಇಟ್ಟುಕೊಳ್ಳಲು ಪ್ರೇರೇಪಿಸುವುದು.
2. ಆದರ್ಶಗುಣಗಳನ್ನು ಬೆಳೆಸುವುದು.
3. ದೇಶದ ಸಂಸ್ಕೃತಿ, ಇತಿಹಾಸ, ಪರಂಪರೆಯನ್ನು ಗೌರವಿಸುವಂತೆ ಅರಿವು ಮೂಡಿಸುವುದು.

**ಕಲಿಕಾ ಸಾಮಗ್ರಿಗಳು : ಆದರ್ಶ ವ್ಯಕ್ತಿಗಳ ಚಿತ್ರಗಳು, ಆದರ್ಶ ತತ್ತ್ವಗಳ ಚಾರ್ಟ್, ವಿದ್ಯಾರ್ಥಿಗಳು ಬೆಳೆಸಿಕೊಳ್ಳಬಹುದಾದ ಗುಣಗಳ ಪಟ್ಟಿ, ಕವಿ ಚಿತ್ರ**

| ಅವಧಿ | ಉಪಘಟಕಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | |
|---|---|---|---|---|---|
| | | | ತಂತ್ರಗಳು | ಸಾಧನಗಳು | ಪ್ರಶ್ನಾಕೋಶ(ಇ–5) |
| 5 | 1.ಕವಿ–ಕಾವ್ಯ–ಪರಿಚಯ<br><br>2.ಮೂರ್ತಿಪೂಜೆ ಮತ್ತು ವಿಶ್ವಶಕ್ತಿಯ ನಿರಕಾರ ಸ್ವರೂಪ | **ಪ್ರೇರಣಾ ಚಟುವಟಿಕೆ:**<br>ಭಾರತದ ಆದರ್ಶ ವ್ಯಕ್ತಿಗಳ ಪಟ್ಟಿ ಮಾಡಿಸುವುದು, ಚಿತ್ರಗಳನ್ನು ತೋರಿಸಿ ಹೆಸರುಗಳನ್ನು ಹೇಳಿಸುವುದು. ಅಂತಹ ವ್ಯಕ್ತಿಗಳಲ್ಲಿ ಆದರ್ಶಗುಣಗಳನ್ನು ಪಟ್ಟಿ ಮಾಡಿಸುವುದು. ಆ ಮೂಲಕ ಪಾಠ ಪ್ರಾರಂಭಿಸುವುದು.<br>**ಪಾಠಪ್ರಕ್ರಿಯೆಗಳು**<br>ಕೇಶವ ಬಲಿರಾಮ ಹೆಡಗೇವಾರ ಪರಿಚಯದ ವೀಡಿಯೋ/ಚಿತ್ರವನ್ನು ತೋರಿಸುತ್ತ ವಿದ್ಯಾರ್ಥಿಗಳ ಮೂಲಕ ಕಪ್ಪುಹಲಗೆಯ ಮೇಲೆ ಕವಿಯ ಸ್ಥಳ, ಕಾಲ,ಕೃತಿಗಳನ್ನು ಬರೆಸುವುದರ ಮೂಲಕ ಕವಿ ಪರಿಚಯಿಸುದು, ಓದಿಸುವುದು. (ಇ–1) ವಿದ್ಯಾರ್ಥಿ ಕೇಶವ ಬಲಿರಾಮ ಹೆಡಗೇವಾರ ಕವಿಯಾಗಿ ತನ್ನನ್ನು ಪರಿಚಯ ಮಾಡಿಸಿಕೊಳ್ಳುವುದು. (ಇ–3)<br><br>ಪಾಠವನ್ನು ಗಟ್ಟಿಯಾಗಿ ಸ್ವರಭಾರದೊಂದಿಗೆ ಓದುವುದು, ವಿದ್ಯಾರ್ಥಿಗಳಿಂದ ಗಟ್ಟಿಯಾಗಿ ಓದಿಸುವುದು,ಮೌನವಾಚನ ನೀಡುವುದು, (ಇ–1) (ಇ–3)<br>ನಂತರ ಪ್ರಶ್ನೋತ್ತರ ವಿಧಾನದ ಮೂಲಕ ಕಥಾನಕ ವಿಧಾನದ ಮೂಲಕ ಮೂರ್ತಿಪೂಜೆ, ವಿಶ್ವಶಕ್ತಿಯ ಸ್ವರೂಪ ಮುಂತಾದ ವಿಚಾರಗಳನ್ನು ಚಿತ್ರಗಳನ್ನು ಬಳಸಿಕೊಂಡು ಅರ್ಥೈಸುವುದು. ವೈಚಾರಿಕ ಮನೋಭಾವನೆಗಳನ್ನು ಬೆಳೆಸಿಕೊಳ್ಳಲು ಪ್ರೇರೇಪಿಸುವುದು ((ಇ–4) | ಆದರ್ಶವ್ಯಕ್ತಿಗಳ ಪಟ್ಟಿ ಮಾಡಿಸುವುದು<br><br>ಅವಲೋಕನ<br><br>ಕವಿ ಪರಿಚಯಿ ಸುವುದು<br>ಬರವಣಿಗೆ<br><br>ಸ್ವಪರಿಚಯ<br><br>ಪ್ರಶ್ನೋತ್ತರ | ಕಪ್ಪುಹಲಗೆ<br><br>ತಪಶೀಲು ಪಟ್ಟಿ<br><br>ಚಿತ್ರ<br><br>ಕಪ್ಪುಹಲಗೆ<br><br>ವಿದ್ಯಾರ್ಥಿ ಕವಿ<br><br>ಪ್ರಶ್ನಾಕೋಶ | 1. ನಿಮಗೆ ಗೊತ್ತಿರುವ ಆದರ್ಶ ವ್ಯಕ್ತಿಗಳ ಹೆಸರನ್ನು ಹೇಳಿರಿ.<br><br>2. ನಿಮಗೆ ಗೊತ್ತಿರುವ ಆದರ್ಶಗುಣಗಳನ್ನು ಪಟ್ಟಿ ಮಾಡಿರಿ.<br><br>3. ಕೇಶವ ಬಲಿರಾಮ ಹಡೆಗೇವಾರ ಅವರ ಹುಟ್ಟಿದ ಊರು ಯಾವುದು?<br><br>4.ಯಾವುದು ಎಂದೆಂದೂ ನಮ್ಮ ಆದರ್ಶವಾಗಿರಬೇಕು?<br><br>5. ಯಾವ ವ್ಯಕ್ತಿ ನಮಗೆ ಆದರ್ಶವಾಗಬಲ್ಲನು? |

| | | | | | |
|---|---|---|---|---|---|
| | 3.ಆದರ್ಶವ್ಯಕ್ತಿ ಹೇಗಿರಬೇಕು ?<br><br>4.ಧ್ವಜಪೂಜೆ ಮತ್ತು ಮಹಾಪುರುಷರ ಪೂಜೆ<br><br>5.ಅವತಾರಿಗಳ ಶ್ರೇಣಿಗೆ ವಿಚಾರವಂತರು<br><br>6.ಭಾಷಾ ಚಟುವಟಿಕೆ | ಆದರ್ಶವ್ಯಕ್ತಿಗಳ ಚಿತ್ರಗಳನ್ನು ತೋರಿಸುತ್ತ, ಆದರ್ಶಗುಣಗಳನ್ನು ಪಟ್ಟಿ ಮಾಡಿಸುವುದು. (ಇ–1,2)<br>ತಮ್ಮ ಜೀವನದಲ್ಲಿ ಗುಣಗಳನ್ನು ಅಳವಡಿಸಿಕೊಂಡಿರುವ ಬಗ್ಗೆ ಚರ್ಚೆ ಮಾಡುವುದು. ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಪ್ರೇರೇಪಿಸುವುದು.(ಇ–1,3)<br><br>ಮಹಾಪುರುಷರ ಗುಣಗಳ ಬಗ್ಗೆ ಚರ್ಚಿಸುತ್ತ ಪೂಜೆ, ಪುನಸ್ಕಾರ ಇತ್ಯಾದಿ ವಿಷಯಗಳನ್ನು ಕುರಿತು ತಿಳಿವಳಿಕೆ ಮೂಡಿಸುವುದು.(ಇ–1)<br><br>ಅಭ್ಯಾಸ ಪ್ರಶ್ನೋತ್ತರಗಳ ಚರ್ಚೆ | ಚರ್ಚೆ<br><br>ವೀಕ್ಷಣೆ<br><br>ಅವಲೋಕನ<br><br>ಭಾಷಣ | ಪ್ರಶ್ನಾಕೋಶ<br><br>ಚಿತ್ರ<br><br>ತಪಶೀಲು ಪಟ್ಟಿ<br><br>ಪ್ರಬಂಧಗಳು | 6. ಮಹಾನಿಯರೊಬ್ಬರು ಯಾವುದಕ್ಕಾಗಿ ಗ್ರಂಥ ಪಠಣ ಮಾಡುತಿದ್ದರು?<br><br>7. ಯಾರು ಯಾರನ್ನು ಅವತಾರಿಗಳ ಪಟ್ಟಿಗೆ ಸೇರಿಸಲಾಗಿದೆ?<br><br>8.ಎಂತಹ ವ್ಯಕ್ತಿಯನ್ನು ಆದರ್ಶವಾಗಿ ಸ್ವೀಕರಿಸಬೇಕು? |

**ವಿಷಯ ಶಿಕ್ಷಕರ ಸಹಿ** **ಮುಖ್ಯಶಿಕ್ಷಕರ ಸಹಿ**

| | | |
|---|---|---|
| **ವಿಷಯ : ಪ್ರಥಮ ಭಾಷೆ ಕನ್ನಡ** | **ಪಾಠ ಯೋಜನೆ** | **ತರಗತಿ : 10** |
| **ಪಾಠದ ಶೀರ್ಷಿಕೆ : ಪದ್ಯ–13. ಹಸುರು (ಕುವೆಂಪು)** | **ದಿನಾಂಕ** | **ರಿಂದ ವರೆಗೆ** |

**ಬೋಧನೆಯ ಉದ್ದೇಶಗಳು :** 1) ಪ್ರಕೃತಿ ಗೀತೆಗಳ ಬಗ್ಗೆ ಅಭಿಮಾನ ಮೂಡಿಸುವುದು.
2) ಪ್ರಕೃತಿಯ ಸೌಂದರ್ಯ ಆಸ್ವಾದಿಸುವುದು
3) ಪ್ರಕೃತಿಯ ಬಗ್ಗೆ ಒಲವು , ಉಳಿವಿನ ಅರಿವು ಮೂಡಿಸುವುದು.

**ಕಲಿಕಾ ಸಾಮಗ್ರಿಗಳು :** ಕುವೆಂಪುರವರ ಭಾವಚಿತ್ರ , ಜ್ಞಾನಪೀಠ ಪ್ರಶಸ್ತಿ ವಿಜೇತರ ಭಾವಚಿತ್ರಗಳು , ಪ್ರಕೃತಿ ಸೌಂದರ್ಯದ ವೀಡಿಯೋ , ಹಸುರು ಪದ್ಯದ ವೀಡಿಯೋ ,ಪ್ರಕೃತಿಯ ಚಿತ್ರಗಳು, ಚಂದನ ವಿಡಿಯೋ ಪಾಠ.

| ಅವಧಿ | ಉಪಘಟಕಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | |
|---|---|---|---|---|---|
| | | | ತಂತ್ರಗಳು | ಸಾಧನಗಳು | ಪ್ರಶ್ನಾಕೋಶ(ಇ–5) |
| 4 | 1.ಕವಿ–ಕಾವ್ಯ ಪರಿಚಯ<br><br>2.ಹಸುರು ಕವಿಯಾತ್ಮ<br><br>3.ಶಾಲಿವನ ಮತ್ತು ಬನದಂಚು<br><br>4.ಪೊಸಪಚ್ಚೆಯ ಜಮಖಾನೆ<br><br>5.ಹೂವಿನ ಕಂಪು ಹಕ್ಕಿಯ ಕೊರಲಿಂಪು ಹಸುರು<br><br>6.ಹಸುರ್ ನೆತ್ತರ್ ಒಡಲು | **ಪ್ರೇರಣಾ ಚಟುವಟಿಕೆ:**<br>ಜ್ಞಾನ ಪೀಠ ಪ್ರಶಸ್ತಿ ವಿಜೇತರ ಭಾವಚಿತ್ರಗಳನ್ನು ತೋರಿಸುವುದು , ಆ ಮೂಲಕ ಕುವೆಂಪು ರವರನ್ನು ಗುರುತಿಸುವುದು(ಇ–2) ಅವರ ಸ್ಥಳ,ಕಾಲ ,ಕೃತಿಗಳು , ಪ್ರಶಸ್ತಿಗಳನ್ನು ಕಪ್ಪು ಹಲಗೆ ಮೇಲೆ ಬರೆಸುವುದು, ವಿದ್ಯಾರ್ಥಿಗಳಿಂದ ಓದಿಸುವುದರ ಮೂಲಕ ಕವಿಪರಿಚಯ ಮಾಡಿಕೊಳ್ಳುವುದು. (ಇ–1) (ಇ–3)<br><br>**ಪಾಠಪ್ರಕ್ರಿಯೆಗಳು :**<br>ಕುವೆಂಪುರವರ ದೇವರು ರುಜು ಮಾಡಿದನು , ಆನಂದಮಯ ಈ ಜಗಹೃದಯ ಗೀತೆಗಳನ್ನು ಕೇಳಿಸುವುದು ಆ ಮೂಲಕ ಪ್ರಕೃತಿ ಮಡಿಲಿಗೆ ಮನಸ್ಸನ್ನು ಸೆಳೆಯುವುದು. (ಇ–1)<br>ಪ್ರಕೃತಿಗೆ ಸಂಬಂದಿಸಿದ ವೀಡಿಯೋಗಳನ್ನು ತೋರಿಸುವುದು<br>ಪದ್ಯವನ್ನು ರಾಗಬದ್ಧವಾಗಿ ಹಾಡುವುದು ವಿದ್ಯಾರ್ಥಿಗಳಿಂಧ ಹಾಡಿಸುವುದು. (ಇ–1)<br>ಹಸುರು ಪದ್ಯದ ವೀಡಿಯೋ ತೋರಿಸುವುದು ಆ ಮೂಲಕ ಸಾರಾಂಶ ಬರೆಯಲು ಪ್ರೇರೇಪಿಸುವುದು. (ಇ–3)<br><br>ಅಭ್ಯಾಸ ಪ್ರಶ್ನೋತ್ತರಗಳ ಚರ್ಚೆ | ಚಿತ್ರಗುರುತಿಸುವುದು.<br><br>ಬರವಣಿಗೆ<br><br>ಆಡಿಯೋ ಕೇಳಿಸುವುದು<br><br>ವೀಕ್ಷಣೆ<br><br>ವೀಕ್ಷಣೆ<br><br>ಬರವಣಿಗೆ<br><br>ಚರ್ಚೆ | ಜ್ಞಾನಪೀಠ ಪ್ರಶಸ್ತಿ ವಿಜೇತರ ಭಾವ ಚಿತ್ರಗಳು<br><br>ಕಪ್ಪುಹಲಗೆ<br><br>ಧ್ವನಿಸುರುಳಿ<br><br>ವೀಡಿಯೋ<br><br>ವೀಡಿಯೋ<br><br>ಶಬ್ಧಕೋಶ<br><br>ಪ್ರಶ್ನಾಕೋಶ | 1)ಜ್ಞಾನಪೀಠ ಪ್ರಶಸ್ತಿ ವಿಜೇತರನ್ನು ಹೆಸರಿಸಿ.<br><br>2)ಕುವೆಂಪುರವರ ಹುಟ್ಟೂರು ಯಾವುದು?<br><br>3)ಕುವೆಂಪುರವರ ಮಹಾಕಾವ್ಯ ಯಾವುದು?<br><br>4)ಆಶ್ವಯುಜದ ಬತ್ತದ ಗದ್ದೆಯ ಬಣ್ಣ ಯಾವ ಹಸುರಿನಂತಿದೆ ?<br><br>5) ಕವಿಯಾತ್ಮ ಏನಾಯಿತು ?<br><br>6) ಕವಿಯು ನೋಡಿದ ಅಡಕೆಯ ತೋಟ ಎಲ್ಲಿದೆ ?<br><br>7) ಕವಿಗೆ ಹುಲ್ಲಿನ ಹಾಸು ಯಾವ ರೀತಿ ಕಂಡಿದೆ ? |

| | | | | | |
|---|---|---|---|---|---|
| | 8.ಭಾಷಾ ಚಟುವಟಿಕೆ<br><br>ಪದ್ಯ ಕಂಠಪಾಠ | ತರಗತಿಯಲ್ಲಿ ಭಾಷಾಚಟುವಟಿಕೆಗಳನ್ನು ಮಾಡಿಸುವುದು (ಇ–1)<br><br>ನಿಗಧಿತ ಪದ್ಯಭಾಗವನ್ನು ಕಂಠಪಾಠ ಮಾಡಿಸಿ ಹೇಳಿಸುವುದು (ಚಟುವಟಿಕೆ) (ಇ–1) (ಇ–3) | | | |

**ವಿಷಯ ಶಿಕ್ಷಕರ ಸಹಿ** **ಮುಖ್ಯಶಿಕ್ಷಕರ ಸಹಿ**

| ವಿಷಯ : ಪ್ರಥಮ ಭಾಷೆ ಕನ್ನಡ | ಪಾಠ ಯೋಜನೆ | ತರಗತಿ : 10 |
|---|---|---|
| ಪಾಠದ ಶೀರ್ಷಿಕೆ : ಗದ್ಯ–06 ಎದೆಗೆ ಬಿದ್ದ ಅಕ್ಷರ (ದೇವನೂರ ಮಹದೇವ) | ದಿನಾಂಕ      ರಿಂದ | ವರೆಗೆ |

**ಬೋಧನೆಯ ಉದ್ದೇಶಗಳು** : 1) ಮೂಢನಂಬಿಕೆಗಳ ವಿರುದ್ಧ ಹೋರಾಡಲು –ಅನುಸರಿಸದಿರಲು ಪ್ರೇರೇಪಿಸುವುದು
2) ಸಮಾನತೆ,ಸತ್ಯ,ಧರ್ಮ,ಜಾತ್ಯತೀತತೆ,ದೈವಿಕ ಗುಣ,ಜಾಗತೀಕರಣ ಮುಂತಾದ ವಿಚಾರಗಳ ಬಗ್ಗೆ ಅರಿವು ಮೂಡಿಸುವುದು
3) ಸಮರ್ಪಣಭಾವ,ಸಹಕಾರ,ಸೌಜನ್ಯತೆ,ನಿಷ್ಪಕ್ಷಪಾತ ಮುಂತಾದ ಮೌಲ್ಯಗಳನ್ನು ಬೆಳೆಸುವುದು

**ಕಲಿಕಾ ಸಾಮಗ್ರಿಗಳು** : ದೇವನೂರ ಮಹಾದೇವ ಪರಿಚಯದ ವೀಡಿಯೋ ,ಬುದ್ಧ,ಅಶೋಕ ಪೈ ಮುಂತಾದವರ ಭಾವಚಿತ್ರಗಳು ,ಆಕಾರ ಗ್ರಂಥ, ಪ್ರಶ್ನಾಕೋಶ, ಪ್ರಬಂಧ ಬರಹಗಳು, ಚಂದನ ವಿಡಿಯೋ ಪಾಠ.

| ಅವಧಿ | ಉಪಘಟಕಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | |
|---|---|---|---|---|---|
| | | | ತಂತ್ರಗಳು | ಸಾಧನಗಳು | ಪ್ರಶ್ನಾಕೋಶ(ಇ–5) |
| 6 | 1.ಕವಿ ದೇವನೂರ ಮಹಾದೇವರವರ ಪರಿಚಯ<br><br>2.ಮನೆಮಂಚಮ್ಮನ ಕತೆ<br><br>4.ವಚನಕಾರರ ಅರಿವು ಮತ್ತು ದೇವರು<br><br>5.ಸತ್ಯ ಸಮಾನತೆ–ಆರ್ತತೆ | **ಪ್ರೇರಣಾ ಚಟುವಟಿಕೆ:**<br>ನಮ್ಮ ಭಾರತ ದೇಶದಲ್ಲಿರುವ ಮೂಢನಂಬಿಕೆಗಳ ಪಟ್ಟಿ ಮಾಡಿಸುವುದು 'ಮೂಢನಂಬಿಕೆಗಳು'ಎಂಬ ವಿಷಯದ ಬಗ್ಗೆ ವಿದ್ಯಾರ್ಥಿಗಳಿಗೆ ಚರ್ಚಾಸ್ಪರ್ಧೆ ಏರ್ಪಡಿಸುವುದು(ಇ–1)(ಇ–3) ನಂತರ ಪ್ರಶ್ನೋತ್ತರ ಚರ್ಚೆ ನಡೆಸುವುದು. ಮೂಢ ನಂಬಿಕೆಗಳಿಂದ ಸಮಾಜದ ಮೇಲಾಗುವ ಪರಿಣಾಮಗಳನ್ನು ವಿವರಿಸುವುದು,<br><br>**ಪಾಠಪ್ರಕ್ರಿಯೆಗಳು**<br>ದೇವನೂರ ಮಹಾದೇವರ ಪರಿಚಯದ ವೀಡಿಯೋವನ್ನು ತೋರಿಸುತ್ತ ವಿದ್ಯಾರ್ಥಿಗಳ ಮೂಲಕ ಕಪ್ಪುಹಲಗೆಯ ಮೇಲೆ ಕವಿಯ ಸ್ಥಳ,ಕಾಲ,ಕೃತಿಗಳನ್ನು ಬರೆಸುವುದರ ಮೂಲಕ ಕವಿ ಪರಿಚಯಿಸುದು,ಓದಿಸುವುದು. (ಇ–1) ವಿದ್ಯಾರ್ಥಿ ದೇವನೂರ ಮಹಾದೇವ ಕವಿಯಾಗು ತನ್ನನ್ನು ಪರಿಚಯ ಮಾಡಿಸಿಕೊಳ್ಳುವುದು. (ಇ–3)<br><br>ಪಾಠವನ್ನು ಗಟ್ಟಿಯಾಗಿ ಸ್ವರಭಾರದೊಂದಿಗೆ ಓದುವುದು, ವಿದ್ಯಾರ್ಥಿಗಳಿಂದ ಗಟ್ಟಿಯಾಗಿ ಓದಿಸುವುದು,ಮೌನವಾಚನ ನೀಡುವುದು, ಮನೆಮಂಚಮ್ಮ ಕತೆಯನ್ನು ವಿದ್ಯಾರ್ಥಿಗಳಿಂದ ರೂಪಕ ಮಾಡಿಸುವುದು. (ಇ–1) (ಇ–3) | ಮೂಢನಂಬಿಕೆಗಳ ಪಟ್ಟಿ ಮಾಡಿಸುವುದು<br><br>ಅವಲೋಕನ<br><br>ಕವಿ ಪರಿಚಯಿಸುವುದು<br><br>ಬರವಣಿಗೆ<br><br>ಸ್ವಪರಿಚಯ<br><br>ಅಭಿನಯ | ಕಪ್ಪುಹಲಗೆ<br><br>ತಪಶೀಲು ಪಟ್ಟಿ<br><br>ವೀಡಿಯೋ<br><br>ಕಪ್ಪುಹಲಗೆ<br><br>ವಿದ್ಯಾರ್ಥಿ ಕವಿ<br><br>ಮನೆಮಂಚಮ್ಮ ಕತೆ | 1)ಮೂಢನಂಬಿಕೆಗಳು ಯಾವುವು ?<br><br>2)ಮೂಢನಂಬಿಕೆಗಳ ವಿರುದ್ಧ ಹೋರಾಡಿದ ಸಮಾಜ ಸುಧಾರಕರನ್ನು ಹೆಸರಿಸಿ.<br><br>3) ದೇವನೂರರ ಕೃತಿಗಳನ್ನು ಹೆಸರಿಸಿರಿ<br><br>4) ಇಂದಲ್ಲ ನಾಳೆ ಫಲ ಕೊಡುವ ಅಂಶಗಳು ಯಾವಾವು ?<br><br>5)ಮಂಚಮ್ಮದೇವಿ ಕತೆ ಹೇಳಿದವರು ಯಾರು?<br><br>6)ಮಂಚಮ್ಮ ಮನೆಮಂಚಮ್ಮನಾದದ್ದು ಹೇಗೆ ?<br>7) ಇಂದು ಮನೆಮಂಚಮ್ಮ ಎಲ್ಲಿ ಪೂಜಿತ ಳಾಗುತ್ತಳೆ?<br>8)ಶಿವಾನುಭವ ಶಬ್ಧಕೋಶ ಬರೆದವರು ಯಾರು? |

| | | | | | |
|---|---|---|---|---|---|
| | 6.ಪೈರವರ ಸಂಶೋಧನ ಸತ್ಯ<br><br>7.ಬುದ್ಧನ ಕಾರುಣ್ಯ<br><br>8.ಭಾಷಾ ಚಟುವಟಿಕೆ | ನಂತರ ಪ್ರಶ್ನೋತ್ತರ ವಿಧಾನದ ಮೂಲಕ ಕಥಾನಕ ವಿಧಾನದ ಮೂಲಕ ನನ್ನ ದೇವರು ಮನೆಮಂಚಮ್ಮನ ಕತೆ,ವಚನಕಾರರ ದೇವರು, ಪೈಗಳ ಸಂಶೋಧನ ಸತ್ಯ<br>ಬುದ್ಧನ ಕಾರುಣ್ಯ ಮುಂತಾದ ವಿಚಾರಗಳನ್ನು ಚಿತ್ರಗಳನ್ನು ಬಳಸಿಕೊಂಡು ಅರ್ಥೈಸುವುದು.<br>ವೈಚಾರಿಕ ಮನೋಭಾವನೆಗಳನ್ನು ಬೆಳೆಸಿಕೊಳ್ಳಲು ಪ್ರೇರೇಪಿಸುವುದು ((ಇ–4)<br>ಅಭ್ಯಾಸ ಪ್ರಶ್ನೋತ್ತರಗಳ ಚರ್ಚೆ | ಪ್ರಶ್ನೋತ್ತರ<br><br>ಚರ್ಚೆ<br><br>ಅವಲೋಕನ | ಪ್ರಶ್ನಾಕೋಶ<br><br>ಪ್ರಶ್ನಾಕೋಶ<br><br>ತಪಶೀಲು ಪಟ್ಟಿ | 9) ವಚನಕಾರರಿಗೆ ಯಾವುದು ದೇವರಾಗಿತ್ತು ?<br><br>10) ಅಶೋಕ ಪೈ ಯಾರು ? |

**ವಿಷಯ ಶಿಕ್ಷಕರ ಸಹಿ** **ಮುಖ್ಯಶಿಕ್ಷಕರ ಸಹಿ**

| ವಿಷಯ : ಪ್ರಥಮ ಭಾಷೆ ಕನ್ನಡ | ಪಾಠ ಯೋಜನೆ | | ತರಗತಿ : 10 |
|---|---|---|---|
| **ಪಾಠದ ಶೀರ್ಷಿಕೆ : ಪದ್ಯ-14. ಛಲಮನೆ ಮೆರೆವೆಂ ( ರನ್ನ )** | **ದಿನಾಂಕ** | **ರಿಂದ** | **ವರೆಗೆ** |

**ಬೋಧನೆಯ ಉದ್ದೇಶಗಳು** : 1,ಹಳಗನ್ನಡ ಸಾಹಿತ್ಯವನ್ನು ಪರಿಚಯಿಸುವುದು.(ಓದುವುದು,ಬರೆಯುವುದು,ಅರ್ಥೈಸಿಕೊಳ್ಳುವುದು)
2.ಪದ್ಯದಲ್ಲಿನ ದುರ್ಯೋಧನನ ಛಲದ ಗುಣವನ್ನು ವಿದ್ಯಾರ್ಥಿಗಳಿಗೆ ತಮ್ಮ ಉತ್ತಮ ಸಾಧನೆಯಲ್ಲಿ ಇರುವಂತೆ ಪ್ರೇರೇಪಿಸುವುದು.
3.ಹಿರಿಯರ ಮಾತನ್ನು ನಿರ್ಲಕ್ಷಿಸಿದರೆ ಆಗುವ ಅನಾಹುತಗಳ ಬಗ್ಗೆ ಅರಿವು ಮೂಡಿಸುವುದು.

**ಕಲಿಕಾ ಸಾಮಗ್ರಿಗಳು : ರನ್ನ ಕವಿಯ ಕಾಲ್ಪನಿಕ ಚಿತ್ರ , ರನ್ನ ಕವಿಯ ಪರಿಚಯದ ಪಿಪಿಟಿ, ಭೀಷ್ಮಾಚಾರ್ಯರು ಮತ್ತು ದುರ್ಯೋಧನರ ನಡುವೆ ನಡೆಯುವ ಈ ಪದ್ಯದ ಸಂಭಾಷಣೆಯ ವೀಡಿಯೋ,** ಚಂದನ ವಿಡಿಯೋ ಪಾಠ.

| ಅವಧಿ | ಉಪಘಟಕಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | |
|---|---|---|---|---|---|
| | | | ತಂತ್ರಗಳು | ಸಾಧನಗಳು | ಪ್ರಶ್ನಾಕೋಶ(5) |
| 5 | 1.ಕವಿ-ಕಾವ್ಯ ಪರಿಚಯ<br><br>2.ಪದ್ಯದ ಹಿನ್ನಲೆ<br><br>3.ಸಮರದೊಳೆನಗಜ್ಜ ಪೇಳಮಾವುದು ಕಜ್ಜಂ<br><br>4.ಚಲಕಿರಿವೆಂ<br><br>5.ಛಲಮನೆ ಮೆರೆವೆಂ | **ಪ್ರೇರಣಾ ಚಟುವಟಿಕೆ:**<br>ಹಳಗನ್ನಡ ಕವಿಗಳ ಹೆಸರುಗಳನ್ನು ಪಟ್ಟಿ ಮಾಡಿಸುವುದು. (ಇ-1) ಪಿಪಿಟಿ ಮೂಲಕ ರನ್ನ ಕವಿಯ ಪರಿಚಯ ಮಾಡಿಸುವುದು ಅವರ ಸ್ಥಳ,ಕಾಲ ,ಕೃತಿಗಳು , ಪ್ರಶಸ್ತಿಗಳನ್ನು ಕಪ್ಪು ಹಲಗೆ ಮೇಲೆ ಬರೆಸುವುದು, ವಿದ್ಯಾರ್ಥಿಗಳಿಂದ ಓದಿಸುವುದರ ಮೂಲಕ ಕವಿಪರಿಚಯ ಮಾಡಿಕೊಳ್ಳುವುದು. (ಇ-1,2,4) ನಂತರ ಮಹಾಭಾರತದ ಕತೆಯನ್ನು ಪದ್ಯದ ಹಿನ್ನೆಲೆಯೊಂದಿಗೆ ಪ್ರಾರಂಭಿಸುವುದು.<br><br>**ಪಾಠಪ್ರಕ್ರಿಯೆಗಳು :**<br><br>ಪದ್ಯವನ್ನು ರಾಗಬದ್ಧವಾಗಿ ಗಮಕದಲ್ಲಿ ಹಾಡುವುದು,ಆಡೀಯೋ ವಾಚನ ಕೇಳಿಸುವುದು. ವಿದ್ಯಾರ್ಥಿಗಳಿಂಧ ಹಾಡಿಸುವುದು. (ಇ-1) ಪ್ರಶ್ನೋತ್ತರ ವಿಧಾನದ ಮೂಲಕ ವಿವರಣೆ. ಭೀಷ್ಮಾಚಾರ್ಯರು ಮತ್ತು ದುರ್ಯೋಧನರ ನಡುವೆ ನಡೆಯುವ ಈ ಪದ್ಯದ ಸಂಭಾಷಣೆಯ ವೀಡಿಯೋ ತೋರಿಸುವುದು ಆ ಮೂಲಕ ಸಾರಾಂಶ ಬರೆಯಲು ಪ್ರೇರೇಪಿಸುವುದು.(ಇ-1.3)<br><br>ಅಭ್ಯಾಸ ಪ್ರಶ್ನೋತ್ತರಗಳ ಚರ್ಚೆ | ಬರವಣಿಗೆ<br><br>ವೀಕಣೆ<br><br>ವೀಕ್ಷಣೆ<br><br>ವೀಕ್ಷಣೆ<br><br>ಸಾರಾಂಶ ಬರೆಸುವುದು<br><br>ಪ್ರಶ್ನೋತ್ತರ | ಕಪ್ಪುಹಲಗೆ<br><br>ಅವಲೋಕನ ಪಟ್ಟಿ<br><br>ಪಿಪಿಟಿ<br><br>ವೀಡಿಯೋ<br><br>ಪದಾರ್ಥ ಕೋಶ<br><br>ಪ್ರಶ್ನಾಕೋಶ | 1)ರನ್ನ ಕವಿಯ ಹುಟ್ಟೂರು ಯಾವುದು ?<br>2)ರನ್ನ ಕವಿಯ ಕೃತಿಗಳನ್ನು ಹೆಸರಿಸಿ.<br>3)ಮಹಾಭಾರತದ ಕತೃ ಯಾರು ?<br>4)ದುರ್ಯೋಧನನು ಯಾರ ಸಲಹೆ ಪಡೆಯಲು ರಣರಂಗಕ್ಕೆ ಬರುತ್ತಾನೆ ?<br>5) ದುರ್ಯೋಧನ ಭೀಷ್ಮರ ಬಳಿ ಬಂದದ್ದು ಯಾಕೆ ?<br>6) ದಿನಪಸುತ ಎಂದರೆ ಯಾರು ?<br>7) ಅಂತಕಾತ್ಮಜ ಎಂದರೆ ಯಾರು ?<br>8) ದುರ್ಯೋಧನ ಯಾರೊಂದಿಗೆ ಛಲವನ್ನು ಮೆರೆಯುತ್ತೇನೆ ಎಂದು ಹೇಳಿದನು ?<br>9) ಛಲಮನೆ ಮೆರೆವೆಂ ಎಂದವರು ಯಾರು ? |

| | | | | | |
|---|---|---|---|---|---|
| | 6.ಭಾಷಾ ಚಟುವಟಿಕೆ | ತರಗತಿಯಲ್ಲಿ ಭಾಷಾಚಟುವಟಿಕೆಗಳನ್ನು ಮಾಡಿಸುವುದು (ಇ–1)<br><br>ನಿಗಧಿತ ಪದ್ಯಭಾಗವನ್ನು ಕಂಠಪಾಠ ಮಾಡಿಸಿ ಹೇಳಿಸುವುದು (ಚಟುವಟಿಕೆ) (ಇ–1) (ಇ–3) | ಚಟುವಟಿಕೆ<br><br>ಕಂಠಪಾಠ ಮಾಡಿಸುವುದು | ಪಠ್ಯಪುಸ್ತಕ | |

**ವಿಷಯ ಶಿಕ್ಷಕರ ಸಹಿ** **ಮುಖ್ಯಶಿಕ್ಷಕರ ಸಹಿ**

| ವಿಷಯ : ಪ್ರಥಮ ಭಾಷೆ ಕನ್ನಡ | | ಪಾಠ ಯೋಜನೆ | | | ತರಗತಿ : 10 |
|---|---|---|---|---|---|
| ಪಾಠದ ಶೀರ್ಷಿಕೆ : ಗದ್ಯ–07. ಶ್ರೇಷ್ಠ ಭಾರತೀಯ ಚಿಂತನೆಗಳು(ಶತಾವಧಾನಿ ಡಾ. ಆರ್. ಗಣೇಶ್) | | ದಿನಾಂಕ | | ರಿಂದ | ವರೆಗೆ |
| **ಬೋಧನೆಯ ಉದ್ದೇಶಗಳು** :1.ಭಾರತೀಯ ಸಂಸ್ಕೃತಿಯ ಬಗ್ಗೆ ಅರಿವು ಮೂಡಿಸುವುದು.<br>2. ಭಾರತವು ಕೊಟ್ಟಿರುವ ಋಣ, ಧರ್ಮ, ಸತ್ಯ, ಋತ ಮುಂತಾದ ಪರಿಕಲ್ಪನೆಗಳ ಬಗ್ಗೆ ತಿಳಿವಳಿಕೆ ಮೂಡಿಸುವುದು. | | | | | |
| **ಕಲಿಕಾ ಸಾಮಗ್ರಿಗಳು:** ಕವಿ–ಕಾವ್ಯ–ಪರಿಚಯದ ಸ್ಲೈಡ್‌ಶೋ, ಚಿತ್ರಗಳು, ಟಿಪ್ಪಣಿಗಳು | | | | | |
| **ಅವಧಿ** | **ಉಪಘಟಕಗಳು** | **ಕಲಿಕಾ/ಬೋಧನಾ ಚಟುವಟಿಕೆಗಳು** | **ಮೌಲ್ಯಮಾಪನ** | | |
| | | | **ತಂತ್ರಗಳು** | **ಸಾಧನಗಳು** | **ಪ್ರಶ್ನಾಕೋಶ(ಇ–5)** |
| 6 | 1.ಕವಿ–ಕಾವ್ಯ–ಪರಿಚಯ<br><br>2.ಋತ, ಸತ್ಯ, ಋಣ, ಧರ್ಮ<br><br>3.ಯಜ್ಞ, ದಾನ, ತಪಸ್ಸು<br><br>4.ಪುರುಷಾರ್ಥಗಳು | **ಪ್ರೇರಣಾ ಚಟುವಟಿಕೆ:** ಭಾರತದಲ್ಲಿ ಆಚರಿಸುವ ಹಬ್ಬಗಳು, ಮೌಲ್ಯಗಳ ಪಟ್ಟಿ ಮಾಡಿಸುವುದು.(ಇ–1,2) ಓದಿಸುವುದು ಮೌಲ್ಯಗಳ ಬಗ್ಗೆ ವಿಸ್ತರಿಸಿ ಹೇಳಲು ಪ್ರೇರೇಪಿಸುವುದು.(ಇ–4)<br><br>**ಪಾಠಪ್ರಕ್ರಿಯೆಗಳು:** ಕವಿಯ ಚಿತ್ರವನ್ನು ತೋರಿಸುತ್ತ ಕವಿಯ ಕಾಲ, ಸ್ಥಳ, ಕೃತಿಗಳು, ಪ್ರಶಸ್ತಿಗಳನ್ನು ಪಟ್ಟಿ ಮಾಡಿಸುವುದು, ಓದಿಸುವುದು.(ಇ–1) ಆ ಮೂಲಕ ಕವಿಯ ಪರಿಚಯ ಮಾಡಿಸುವುದು.<br><br>ಪಾಠವನ್ನು ಗಟ್ಟಿಯಾಗಿ ವಾಚಿಸುವುದು. ವಿದ್ಯಾರ್ಥಿಗಳಿಂದ ಗಟ್ಟಿಓದು, ಮೌನ ಓದು ಮಾಡಿಸುವುದು. ಪ್ರಶ್ನೋತ್ತರ ವಿಧಾನದ ಮೂಲಕ ಚರ್ಚಿಸುತ್ತಾ ಸಂವಹನ ನಡೆಸುವುದು. (ಇ–4)<br><br>ಸತ್ಯಕ್ಕೆ ಜಯ ಇರುವ ಕಥೆಗಳನ್ನು ಉದಾಹರಿಸುತ್ತ ಋತ, ಸತ್ಯ, ಋಣ, ಧರ್ಮಗಳ ಬಗ್ಗೆ ವಿವರಿಸುವುದು.<br><br>ಯಜ್ಞದ ಚಿತ್ರ ತೋರಿಸುತ್ತ ಅದರ ಮಹತ್ವ, ದಾನದ ನಿದರ್ಶನಗಳನ್ನು ಹೇಳತ್ತ ದಾನ, ತಪಸ್ಸು ಇವುಗಳ ಬಗ್ಗೆ ಚರ್ಚಿಸುವುದು.(ಇ–1, 2, 4)<br><br>ಧರ್ಮ,ಅರ್ಥ,ಕಾಮ,ಮೋಕ್ಷಗಳನ್ನು ಕುರಿತು ಟಿಪ್ಪಣಿಗಳನ್ನು ನೀಡಿ ಓದಿಸುವುದು, ಆ ಮೂಲಕ ಅವುಗಳ ಬಗ್ಗೆ ಚರ್ಚಿಸುವುದು, ವಿವರಿಸುವುದು.(ಇ–1,2) | ಮೌಲ್ಯಗಳ ಪಟ್ಟಿ ಓದು<br><br>ಕವಿಚಿತ್ರ ವೀಕ್ಷಣೆ<br><br>ಓದು<br><br>ಪ್ರಶ್ನೋತ್ತರ<br><br>ಚಿತ್ರಗಳು<br><br>ಓದಿಸುವುದು | ಕಪ್ಪುಹಲಗೆ<br><br>ಕವಿ ಪರಿಚಯದ ಸ್ಲೈಡ್‌ಶೋ<br><br>ಪುಸ್ತಕ<br><br>ಪ್ರಶ್ನಾಕೋಶ<br><br>ಅವಲೋಕನ<br><br>ಟಿಪ್ಪಣಿಗಳು | 1.ಆರ್.ಗಣೇಶ ಅವರ ಜನ್ಮ ಸ್ಥಳ ಯಾವುದು?<br><br>2.ಋತದ ಮೂಲಭಾಗಗಳು ಯಾವುವು?<br><br>3.ಧರ್ಮದ ಆಚರಣೆಗಿರುವ ಪ್ರಧಾನ ಮಾರ್ಗ ಯಾವುದು?<br><br>4.ಹರಿಶ್ಚಂದ್ರನ ಮಹೋನ್ನತ ಗುಣ ಯಾವುದು?<br><br>5. ಯಜ್ಞ ಎಂಬ ಶಬ್ದಕ್ಕೆ ಏನೇನು ಅರ್ಥಸ್ವಾರಸ್ಯಗಳಿವೆ?<br><br>6. ಅನ್ನದ ವಿಷಯದಲ್ಲಿ ವೇದ ಏನು ಹೇಳಿದೆ?<br><br>7.ಯಾವುದು ಸ್ವಧರ್ಮ ಎಂದು ಲೇಖಕರು ಹೇಳುತ್ತಾರೆ? |

| | | | | | |
|---|---|---|---|---|---|
| | 5.ಸ್ವಧರ್ಮ<br><br>6.ಭಾಷಾ ಚಟುವಟಿಕೆ | ಧರ್ಮ– ಸ್ವಧರ್ಮಗಳ ಬಗ್ಗೆ ವಿವರಿಸುವುದು.<br><br>ತರಗತಿಯಲ್ಲಿ ಭಾಷಾಚಟುವಟಿಕೆಗಳನ್ನು ಮಾಡಿಸುವುದು (ಇ–1) | ಚಟುವಟಿಕೆಗಳು | ಪಠ್ಯಪುಸ್ತಕ | |

**ವಿಷಯ ಶಿಕ್ಷಕರ ಸಹಿ** **ಮುಖ್ಯಶಿಕ್ಷಕರ ಸಹಿ**

| ವಿಷಯ : ಪ್ರಥಮ ಭಾಷೆ ಕನ್ನಡ | ಪಾಠ ಯೋಜನೆ | | ತರಗತಿ : 10 |
|---|---|---|---|
| ಪಾಠದ ಶೀರ್ಷಿಕೆ : ಪದ್ಯ-15. ವೀರಲವ (ಲಕ್ಷ್ಮೀಶ ) | ದಿನಾಂಕ | ರಿಂದ | ವರೆಗೆ |

**ಬೋಧನೆಯ ಉದ್ದೇಶಗಳು** :1.ಹಳಗನ್ನಡ ಷಟ್ಪದಿ ಸಾಹಿತ್ಯ ಅಧ್ಯಯನದಲ್ಲಿ ಆಸಕ್ತಿ ಮೂಡಿಸುವುದು.
(ಹಳಗನ್ನಡ ಓದುವುದು,ಬರೆಯುವುದು,ಅರ್ಥೈಸಿಕೊಳ್ಳುವುದು ಛಂದಸ್ಸು )
2.ಕರ್ತವ್ಯನಿಷ್ಠೆ,ಧೈರ್ಯ,ಸಾಹಸ,ತಾಳ್ಮೆ,ಸತ್ಯ,ಮುಂತಾದ ಗುಣಗಳ ಬಗ್ಗೆ ಅರಿವು ಮೂಡಿಸುವುದು.

**ಕಲಿಕಾ ಸಾಮಗ್ರಿಗಳು:** ಕವಿ- ಕಾವ್ಯ-ಪರಿಚಯ ಚಾರ್ಟುಪೋಟೋ ,ಲವಕುಶ ಕಥೆಯ ವಿಡಿಯೋ,ವಿಡಿಯೋ ಪ್ಲೇಯರ್(ಡಿಜಟಲ್ ಕ್ಲಾಸ್) ರಾಮಾಯಣ ಕತೆ ಪುಸ್ತಕಗಳು,ಹಳಗನ್ನಡ-ಹೊಸಗನ್ನಡ ಶಬ್ದಕೋಶ, ಚಂದನ ವಿಡಿಯೋ ಪಾಠ.

| ಅವಧಿ | ಉಪಘಟಕಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | |
|---|---|---|---|---|---|
| | | | ತಂತ್ರಗಳು | ಸಾಧನಗಳು | ಪ್ರಶ್ನಾಕೋಶ(ಇ-5) |
| 6 | 1.ಲಕ್ಷ್ಮೀಶ ಕವಿ ಪರಿಚಯ<br><br>2.ಪೂರ್ವಕತೆ<br><br>3.ಆಶ್ರಮ ಹೊಕ್ಕಿದ ರಾಮನ ಯಜ್ಞಾಶ್ವ<br><br>4.ಯಜ್ಞಾಶ್ವ ಹಣೆಯಲ್ಲಿನ ಪಟ್ಟದ ಲಿಖಿತನೋದಿದ ಲವ | **<u>ಪ್ರೇರಣಾ ಚಟುವಟಿಕೆ :</u>**<br><br>ರಾಮಾಯಣ, ಮಹಾಭಾರತ ವಿಷಯದ ಕೃತಿಗಳನ್ನು ಬರೆದ ಕವಿಗಳನ್ನು ಪಟ್ಟಿಮಾಡಿಸುವುದು.(ಇ-1) ಹಳಗನ್ನಡ,ನಡುಗನ್ನಡ ಕವಿಗಳ ಭಾವಚಿತ್ರಗಳನ್ನು ತೋರಿಸುತ್ತ ಲಕ್ಷ್ಮೀಶ ಕವಿಯ ಚಿತ್ರ ಗುರುತಿಸುವುದು ಆಮೂಲಕ ಲಕ್ಷ್ಮೀಶ ಕವಿಯ ಪರಿಚಯಿಸುವುದು ನಂತರ ಭೀಮ-ಘಟೋತ್ಕಚರ. ಅರ್ಜುನ-ಬಬ್ರುವಾಹನರ ಕಾಳಗದ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸುವುದು.<br><br>**ಪಾಠಪ್ರಕ್ರಿಯೆಗಳು**<br><br>ಲವಕುಶ ಕಥೆಯ ವೀಡಿಯೋವನ್ನು ತೋರಿಸುವುದು, ವೀಡಿಯೋದಲ್ಲಿ ಬರುವ ಪಾತ್ರಗಳ ಬಗ್ಗೆ ಇರುವ ಪುಸ್ತಕ ಭಾಗಗಳನ್ನು ಓದಿಸುವುದು(ಇ-1) ನಂತರ ಪದ್ಯಭಾಗದ ಪೂರ್ವಕತೆಯನ್ನು ಹೇಳುವುದು, ,ಪದಗಳ ವಿಂಗಡಣೆ ಓದು,ವಿದ್ಯಾರ್ಥಿಗಳಿಂದ ಓದಿಸುವುದು,ನಂತರ ಶಬ್ದಕೋಶ ಉಪಯೋಗಿಸಿಕೊಂಡು ಕೆಲವು ಪದಗಳಿಗೆ ಅರ್ಥ ಹುಡುಕುವಂತೆ ಪ್ರೇರೇಪಿಸುವುದು.ಪದ್ಯ ಭಾಗವನ್ನು ಗಮಕದಲ್ಲಿ ಹಾಡಿರುವುದನ್ನು ಆಡಿಯೋ ಮೂಲಕ ಕೇಳಿಸುವುದು ನಂತರ ಶಿಕ್ಷಕರು ಸ್ವತಃ ಗಮಕದಲ್ಲಿ ಹಾಡುತ್ತ ಅರ್ಥೈಸುವುದು.ಪದ್ಯದ ಸಾರಾಂಶವನ್ನು | ಕವಿಗಳ ಪಟ್ಟಿ ಮಾಡಿಸುವುದು<br><br>ಕವಿಚಿತ್ರ ಗುರುತಿಸುದು<br><br>ಕಥೆ ಹೇಳುವುದು<br><br>ವೀಡಿಯೋ ತೋರಿಸುವುದು<br><br>ಪದಗಳ ಅರ್ಥ ಹುಡುಕಿಸುವುದು<br><br>ಕೇಳಿಸುವುದು<br><br>ಪದ್ಯದಸಾರಾಂಶ ವನ್ನು ಬರೆಸುವುದು | ಕಪ್ಪುಹಲಗೆ<br><br>ಕವಿಗಳ ಚಿತ್ರಗಳು<br><br>ಕಥೆ ಪುಸ್ತಕ<br><br>ವಿಡಿಯೋ ಪ್ಲೇಯರ್<br><br>ಶಬ್ಧಕೋಶಗಳು<br><br>ಆಡಿಯೋ ಪ್ಲೇಯರ್<br><br>ನೋಟ್ ಪುಸ್ತಕಗಳು,ಪಠ್ಯ ಪುಸ್ತಕಗಳು | 1.ರಾಮಾಯಣ,ಮಹಾಭಾರತಗಳನ್ನು ಬರೆದ ಕವಿಗಳನ್ನು ಹೆಸರಿಸಿ.<br><br>2.ಲಕ್ಷ್ಮೀಶ ಕವಿ ಬರೆದ ಕೃತಿ ಯಾವುದು ?<br><br>3.ಘಟೋತ್ಕಚನ ತಂದೆ ಯಾರು ?<br><br>4.ಯಜ್ಞಾಶ್ವ ಯಾರದ್ದು ?<br><br>5.ಯಜ್ಞಾಶ್ವ ಯಾರ ಆಶ್ರಮವನ್ನು ಹೊಕ್ಕಿತ್ತು ?<br><br>6.ಯಜ್ಞಾಶ್ವದ ಹಣೆಯ ಪಟ್ಟಿಯಲ್ಲಿ ಏನೆಂದು ಬರೆಯಲಾಗಿತ್ತು ?<br><br>7.ಯಜ್ಞಾಶ್ವದ ಕುದುರೆಯನ್ನು ಕಟ್ಟಿದವರು ಯಾರು ? |

| | | | | | |
|---|---|---|---|---|---|
| | 5.ಲವ–ಮುನಿಸುತರ ಸಂವಾದ<br><br><br><br><br>6.ಭಾಷಾ ಚಟುವಟಿಕೆ | ಹೇಳುವುದು,ವಿದ್ಯಾರ್ಥಿಗಳಿಂದ ಹೇಳಿಸುವುದು, ಪದ್ಯದ ಸಾರಾಂಶವನ್ನು ವಿದ್ಯಾರ್ಥಿಗಳಿಂದ ಬರೆಸುವುದು(ಇ–1,2,3,4) (ಶಬ್ದಾರ್ಥಕೋಶ ಬಳಸಿ)ಆ ಮೂಲಕ ಲವನ ಸಾಹಸ ಧೈರ್ಯಗಳನ್ನು ವರ್ಣಿಸುವುದು .<br><br>ಪ್ರಶ್ನೋತ್ತರ ಚರ್ಚೆ ಮಾಡುವುದು.<br><br>ನಿಗಧಿತ ಪದ್ಯಭಾಗವನ್ನು ಕಂಠಪಾಠ ಮಾಡಿಸಿ ಹೇಳಿಸುವುದು (ಚಟುವಟಿಕೆ) (ಇ–1) (ಇ–3) | ಪ್ರಶ್ನೋತ್ತರ<br><br><br>ಕಂಠಪಾಠ ಮಾಡಿಸುವುದು | ಪ್ರಶ್ನಾಕೋಶ<br><br><br>ಪಠ್ಯಪುಸ್ತಕ | 8.ಲವನು ಯಜ್ಞದ ಕುದುರೆಯನ್ನು ಯಾವುದರಿಂದ ಕಟ್ಟಿದನು ? |

**ವಿಷಯ ಶಿಕ್ಷಕರ ಸಹಿ** **ಮುಖ್ಯಶಿಕ್ಷಕರ ಸಹಿ**

| ವಿಷಯ : ಪ್ರಥಮ ಭಾಷೆ ಕನ್ನಡ | ಪಾಠ ಯೋಜನೆ | ತರಗತಿ : 10 |
|---|---|---|
| ಪಾಠದ ಶೀರ್ಷಿಕೆ : ಗದ್ಯ–07. ವೃಕ್ಷಸಾಕ್ಷಿ (ದುರ್ಗಸಿಂಹ) | ದಿನಾಂಕ | ರಿಂದ ವರೆಗೆ |

**ಬೋಧನೆಯ ಉದ್ದೇಶಗಳು** :1.ಹಳಗನ್ನಡ ಸಾಹಿತ್ಯ ಅಧ್ಯಯನದಲ್ಲಿ ಆಸಕ್ತಿ ಮೂಡಿಸುವುದು. (ಹಳಗನ್ನಡ ಓದುವುದು, ಬರೆಯುವುದು, ಅರ್ಥೈಸಿಕೊಳ್ಳುವುದು)
2.ತಾಳ್ಮೆ, ಸತ್ಯ, ಸಹಕಾರ, ಹೊಂದಾಣಿಕೆ ಮುಂತಾದ ಗುಣಗಳ ಬಗ್ಗೆ ಅರಿವು ಮೂಡಿಸುವುದು.

**ಕಲಿಕಾ ಸಾಮಗ್ರಿಗಳು:** ಕವಿ– ಕಾವ್ಯ–ಪರಿಚಯ ಚಾರ್ಟು,ಕಥೆಯ ವಿಡಿಯೋ,ವಿಡಿಯೋ ಪ್ಲೇಯರ್(ಡಿಜಟಲ್ ಕ್ಲಾಸ್) ಪಂಚತಂತ್ರ ಕತೆ ಪುಸ್ತಕಗಳು,ಹಳಗನ್ನಡ–ಹೊಸಗನ್ನಡ ಶಬ್ದಕೋಶ, ಚಂದನ ವಿಡಿಯೋ ಪಾಠ.

| ಅವಧಿ | ಉಪಘಟಕಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | |
|---|---|---|---|---|---|
| | | | ತಂತ್ರಗಳು | ಸಾಧನಗಳು | ಪ್ರಶ್ನಾಕೋಶ(ಇ–5) |
| 7 | 1.ದುರ್ಗಸಿಂಹನ ಪರಿಚಯ<br><br>2.ಹೊನ್ನ ಕದ್ದ ದುಷ್ಟಬುದ್ಧಿ<br><br>3.ವೃಕ್ಷಸಾಕ್ಷಿ ಕೇಳುವುದು<br><br>4.ಪ್ರೇಮಮತಿಯ ಸುಳ್ಳು ನ್ಮಡಿ<br><br>5.ಧರ್ಮಬುದ್ಧಿಯ ಸಾಕ್ಷ್ಯತಂತ್ರ | **ಪ್ರೇರಣಾ ಚಟುವಟಿಕೆ** : ಹಳಗನ್ನಡ ಕವಿಗಳನ್ನು ಪಟ್ಟಿಮಾಡಿಸುವುದು.(ಇ–1) ಆಮೂಲಕ ದುರ್ಗಸಿಂಹ ಕವಿಯ ಪರಿಚಯಿಸುವುದು.ಸತ್ಯದ ಬಗ್ಗೆ ಇರುವ(ಸತ್ಯವಾದಿ ಸುದಾಮೆ,ಹರಿಶ್ಚಂದ್ರನ ಕತೆ) ಯಾವುದಾದರೂ ಒಂದು ಕತೆಯನ್ನು ಹೇಳಿ "ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ" ಎಂಬುದರ ಬಗ್ಗೆ ವಿದ್ಯಾರ್ಥಿ ಗಳಲ್ಲಿ ಅರಿವು ಮೂಡಿಸುವುದು.(ಇ–4)<br><br>**ಪಾಠಪ್ರಕ್ರಿಯೆಗಳು**<br><br>ಪಂಚತಂತ್ರ ಕಥೆಯ ವೀಡಿಯೋವನ್ನು ತೋರಿಸುವುದು, ವಿಡಿಯೋದ ಸಾರಾಂಶವನ್ನು ವಿದ್ಯಾರ್ಥಿಗಳಿಂದ ಬರೆಸುವುದು(ಇ–1,2,3) ನಂತರ ಗದ್ಯಭಾಗವನ್ನು ಓದುವುದು,ಪದಗಳ ವಿಂಗಡಣೆ ಓದು,ವಿದ್ಯಾರ್ಥಿಗಳಿಂದ ಓದಿಸುವುದು,ನಂತರ ಶಬ್ದಕೋಶ ಉಪಯೋಗಿಸಿಕೊಂಡು ಕೆಲವು ಪದಗಳಿಗೆ ಅರ್ಥ ಹುಡುಕುವಂತೆ ಪ್ರೇರೇಪಿಸುವುದು.(ಇ–1,2) ಗದ್ಯಭಾಗವನ್ನು ಓದುತ್ತ ಅರ್ಥೈಸುವುದು.ಕಥೆಯ ಸಾರಾಂಶವನ್ನು ಹೇಳುವುದು,ವಿದ್ಯಾರ್ಥಿಗಳಿಂದ ಹೇಳಿಸುವುದು, ಕಥೆಯ ಸಾರಾಂಶವನ್ನು ವಿದ್ಯಾರ್ಥಿಗಳಿಂದ ಬರೆಸುವುದು.(ಇ–2,4) | ಕವಿಗಳ ಪಟ್ಟಿ ಮಾಡಿಸುವುದು<br><br>ಕಥೆ ಹೇಳುವುದು<br><br>ವೀಡಿಯೋ ತೋರಿಸುವುದು<br><br>ಕಥೆ ಬರೆಸುವುದು<br><br>ಪದಗಳ ಅರ್ಥ ಹುಡುಕಿಸುವುದು<br><br>ಕಥೆಯ ಸಾರಾಂಶವನ್ನು ಬರೆಸುವುದು | ಕಪ್ಪುಹಲಗೆ<br><br>ಕಥೆ ಪುಸ್ತಕ<br><br>ವಿಡಿಯೋ<br><br>ಪ್ಲೇಯರ್(ಡಿಜಟಲ್ ಕ್ಲಾಸ್)ಕಪ್ಪುಹಲಗೆ<br><br>ಶಬ್ಧಕೋಶಗಳು<br><br>ನೋಟ್ ಪುಸ್ತಕಗಳ | 1.ಹಳಗನ್ನಡದ ಕವಿಗಳನ್ನು ಹೆಸರಿಸಿ<br><br>2.ಪಂಚತಂತ್ರ ಕೃತಿಯ ಕರ್ತೃ ಯಾರು ?<br><br>3.ಕಥೆಯಲ್ಲಿ ಬರುವ ಸತ್ಯವಾದಿ ಯಾರು ?<br><br>4.ಸತ್ಯಕ್ಕೆ ಸಾವಿಲ್ಲ:________ (ಪ್ರರ್ಣಗೊಳಿಸಿ)<br><br>5) ದುಷ್ಟಬುದ್ಧಿ ಧರ್ಮಬುದ್ಧಿಯ ಬಳಿ ಏಕೆ ಬಂದನು ?<br><br>6.ದುಷ್ಟಬುದ್ಧಿ ಧರ್ಮಬುದ್ಧಿಯ ಮೇಲೆ ಯಾವ ಆರೋಪ ಹೊರಿಸಿದನು ?<br><br>7.ದುಷ್ಟಬುದ್ಧಿ ಧರ್ಮಬುದ್ಧಿಯರು ನ್ಯಾಯ ತೀರ್ಮಾನಕ್ಕಾಗಿ ಎಲ್ಲಿಗೆ ಬಂದರು ?8.ವೃಕ್ಷವನ್ನು ಸಾಕ್ಷಿಮಾಡಿದ್ದು ಏಕೆ?ಮತ್ತು ಯಾರು ?<br>9.ದುಷ್ಟಬುದ್ಧಿ ಸುಳ್ಳು ಸಾಕ್ಷಿ ಹೇಳಿಸಲು ಯಾರಲ್ಲಿ ಒತ್ತಾಯಿಸಿದನು ?<br>10.ಧರ್ಮಬುದ್ಧಿ ಬೆಳಗಿನ ಸಮಯವನ್ನು ಹೇಗೆ ಕಳೆದನು?<br>11.ವಟವೃಕ್ಷದ ಬಳಿ ಧರ್ಮಾಧಿಕರಣರು ಏಕೆ ಬಂದರು ?<br><br>12.ಧರ್ಮಬುದ್ಧಿ ಸುಳ್ಳುಸಾಕ್ಷಿಯನ್ನು ಹೇಗೆ ಪತ್ತೆಹಚ್ಚಿದನು? |

| | | | | | |
|---|---|---|---|---|---|
| | 7.ಭಾಷಾ ಚಟುವಟಿಕೆ | ಪ್ರಶ್ನೋತ್ತರ ಚರ್ಚೆ ಮಾಡುವುದು. | ಪ್ರಶ್ನೋತ್ತರ | ಪ್ರಶ್ನಾಕೋಶ | |

**ವಿಷಯ ಶಿಕ್ಷಕರ ಸಹಿ** **ಮುಖ್ಯಶಿಕ್ಷಕರ ಸಹಿ**

| ವಿಷಯ : ಪ್ರಥಮ ಭಾಷೆ ಕನ್ನಡ | ಪಾಠ ಯೋಜನೆ | | ತರಗತಿ : 10 |
|---|---|---|---|
| ಪಾಠದ ಶೀರ್ಷಿಕೆ : ಪದ್ಯ–16. ಕೆಮ್ಮನೆ ಮೀಸೆವೊತ್ತನೇ | ದಿನಾಂಕ | ರಿಂದ | ವರೆಗೆ |

**ಬೋಧನೆಯ ಉದ್ದೇಶಗಳು :** 1) ಹಳಗನ್ನಡ ಸಾಹಿತ್ಯದ ಪರಿಚಯವನ್ನು ಮಾಡುವುದು.(ಓದುವುದು,ಬರೆಯುವುದು,ಅರ್ಥೈಸಿಕೊಳ್ಳುವುದು)
2) ಸಹಕಾರದ ಮನೋಭಾವವನ್ನು ಬೆಳೆಸುವುದು.ಸ್ನೇಹವನ್ನು ಉಳಿಸಿಕೊಂಡು ವೃದ್ಧಿಸಿಕೊಂಡುಹೋಗುವಂತೆ ಮಾಡುವುದು.
3) ಅಹಂಭಾವವನ್ನು ತೆಜಿಸುವ ಮನೋಭಾವವನ್ನು ಬೆಳೆಸುವುದು.

**ಕಲಿಕಾ ಸಾಮಗ್ರಿಗಳು :** ಪಂಪ ಕವಿಯ ಭಾವಚಿತ್ರ,ಪರಿಚಯದ ಪಿಪಿಟಿ ವೀಡಿಯೋ, ದೋಣ–ದ್ರುಪದದ ಸಂಭಾಷಣೆಯ ವೀಡಿಯೋ, ವೃತ್ತಗಳು,ಅಲಂಕಾರಗಳ ವೀಡಿಯೋ,ಚಾರ್ಟ್

| ಅವಧಿ | ಉಪಘಟಕಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | |
|---|---|---|---|---|---|
| | | | ತಂತ್ರಗಳು | ಸಾಧನಗಳು | ಪ್ರಶ್ನಾಕೋಶ(ಇ–5) |
| 7 | 1.ಕವಿ ಕಾವ್ಯ ಪರಿಚಯ<br><br>2,ಕಥೆಯ ಹಿನ್ನೆಲೆ<br><br>3.ಪರುಶರಾಮ ಬಳಿ ದ್ರೋಣರು<br><br>4.ದ್ರುಪದನ ಅರಮನೆಯಲ್ಲಿ ದ್ರೋಣ ಮತ್ತು ದ್ರುಪಧರ ಮುಖಾಮುಖಿ<br><br>5.ದ್ರೋಣರ ಶಪಥ | **ಪ್ರೇರಣಾ ಚಟುವಟಿಕೆ:**<br>ರಾಮಾಯಣ, ಮಹಾಭಾರತ ವಿಷಯದ ಕೃತಿಗಳನ್ನು ಬರೆದ ಕವಿಗಳನ್ನು ಪಟ್ಟಿಮಾಡಿಸುವುದು.(ಇ–1) ಹಳಗನ್ನಡ, ನಡುಗನ್ನಡ ಕವಿಗಳ ಭಾವಚಿತ್ರಗಳನ್ನು ತೋರಿಸುತ್ತ ಪಂಪ ಕವಿಯ ಚಿತ್ರ ಗುರುತಿಸುವುದು.(ಇ–2) ಪಿಪಿಟಿ ವೀಡಿಯೋ ತೋರಿಸುವುಸುವುದರ ಮೂಲಕ ಪಂಪ ಕವಿಯ ಪರಿಚಯಿಸುವುದು ವಿದ್ಯಾರ್ಥಿಗಳಿಂದ ಓದಿಸುವುದರ ಮೂಲಕ ಕವಿಪರಿಚಯ ಮಾಡಿಕೊಳ್ಳುವುದು. (ಇ–1) (ಇ–3)<br><br>**ಪಾಠಪ್ರಕ್ರಿಯೆಗಳು :**<br>ಪದ್ಯದ ಹಿನ್ನಲೆಯನ್ನು ಕಥಾರೂಪದಲ್ಲಿ ಹೇಳುವುದು, ಪದ್ಯದ ಗಮಕ ವಾಚನ ಮಾಡುವುದು.ಗಮಕವಾಚನದ ಆಡಿಯೋ ಕೇಳಿಸುವುದು,ವಿದ್ಯಾರ್ಥಿಗಳಿಂದ ವಾಚನ ಮಾಡಿಸುವುದು.(ಇ–1) ವೀಡಿಯೋ ತೋರಿಸುವುದು ನಂತರ ಪ್ರಶ್ನೋತ್ತರ ವಿಧಾನ ,ಕಥಾನಕ ವಿಧಾನದ ಮೂಲಕ ಅರ್ಥೈಸುವುದು ಆ ಮೂಲಕ ಸಾರಾಂಶ ಬರೆಯಲು ಪ್ರೇರೇಪಿಸುವುದು. (ಇ–1,2,4)<br><br>ಅಭ್ಯಾಸ ಪ್ರಶ್ನೋತ್ತರಗಳ ಚರ್ಚೆ | ಚಿತ್ರಗುರುತಿಸುವುದು.<br><br>ವೀಕ್ಷಣೆ<br><br>ಬರವಣಿಗೆ<br><br>ಆಡಿಯೋ ಕೇಳಿಸುವುದು<br><br>ವೀಕ್ಷಣೆ<br><br>ಬರವಣಿಗೆ<br><br>ಚರ್ಚೆ | ಕವಿಗಳ ಭಾವಚಿತ್ರಗಳು<br><br>ವೀಡಿಯೋ<br><br>ಕಪ್ಪುಹಲಗೆ<br><br>ಧ್ವನಿಸುರುಳಿ<br><br>ವೀಡಿಯೋ<br><br>ಶಬ್ಧಕೋಶ<br><br>ಪ್ರಶ್ನಾಕೋಶ | 1)ಮಹಾಭಾರತ ಬರೆದವರು ಯಾರು ?<br><br>2)ಕನ್ನಡದ ಆದಿ ಕವಿ ಎಂದು ಯಾರನ್ನು ಕರೆಯಲಾಗುತ್ತದೆ ?<br><br>3)ಪಂಪನ ಜನ್ಮಸ್ಥಳ ಯಾವುದು ?<br><br>4)ಪಂಪನ ಕೃತಿಗಳನ್ನು ಹೆಸರಿಸಿ ?<br><br>5) ದ್ರೋಣ–ದ್ರುಪದರ ಗುರು ಯಾರು ?<br><br>6) ದ್ರೋಣರು ಪರುಶರಾಮನಲ್ಲಿಗೆ ಏಕೆ ಬಂದರು ?<br><br>7)ದ್ರೋಣನು ಯಾರೊಡನೆ ಪರುಶುರಾಮರ ಬಳಿ ಬಂದನು ?<br><br>8) ದ್ರೋಣಚಾರ್ಯರು ಕೈಗೊಂಡ ಶಪಥವೇನು ? |

| | | | | | |
|---|---|---|---|---|---|
| | 6.ಭಾಷಾ ಚಟುವಟಿಕೆ | ತರಗತಿಯಲ್ಲಿ ಭಾಷಾಚಟುವಟಿಕೆಗಳನ್ನು ಮಾಡಿಸುವುದು (ಇ–1)<br><br>ನಿಗಧಿತ ಪದ್ಯಭಾಗವನ್ನು ಕಂಠಪಾಠ ಮಾಡಿಸಿ ಹೇಳಿಸುವುದು (ಚಟುವಟಿಕೆ) (ಇ–1) (ಇ–3) | ಕಂಠಪಾಠ ಮಾಡಿಸುವುದು | ಪಠ್ಯಪುಸ್ತಕ | |

**ವಿಷಯ ಶಿಕ್ಷಕರ ಸಹಿ** **ಮುಖ್ಯಶಿಕ್ಷಕರ ಸಹಿ**